# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಡಿಸೆಂಬರ್ 30, 2020

ಸಂಪುಟ : 47 ಸಂಚಿಕೆ : 240 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**ಕಾರ್ತಿಕ ...** ದಾವಣಗೆರೆ ಹಳೆಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ರಾತ್ರಿ ಕಾರ್ತಿಕ ಮಹೋತ್ಸವ ನಡೆಯಿತು.

# ಇಂದು ಪಂಚಾಯ್ತಿ ಫಲಿತಾಂಶ

## ಮತ ಎಣಿಕೆಗೆ ಜಿಲ್ಲಾಡಳಿತದಿಂದ ಸಿದ್ಧತೆ: ಜಿಲ್ಲಾಧಿಕಾರಿ ಬೀಳಗಿ

ದಾವಣಗೆರೆ, ಡಿ.29- ಜಿಲ್ಲೆಯ ಒಟ್ಟು 187 ಗ್ರಾಮ ಪಂಚಾಯತಿಗಳಿಗೆ ನಡೆದ ಚುನಾವಣೆಯ ಫಲಿತಾಂಶವು ನಾಳೆ ದಿನಾಂಕ 30ರ ಬುಧವಾರ ಹೊರ ಬೀಳಲಿದ್ದು, ಅಭ್ಯರ್ಥಿಗಳ ಹಣೆಬರಹ ನಿರ್ಧಾರವಾಗಲಿದೆ.

ನಾಳೆ ಬುಧವಾರ ನಡೆಯಲಿರುವ ಮತ ಎಣಿಕೆ ಕಾರ್ಯಕ್ಕೆ ಜಿಲ್ಲಾಡಳಿತ ಈಗಾಗಲೇ ಸಕಲ ಸಿದ್ಧತೆ ಮಾಡಿಕೊಂಡಿದೆ. ಈ ಬಗ್ಗೆ ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾಹಿತಿ ನೀಡುತ್ತಾ, ಜಿಲ್ಲೆಯಲ್ಲಿ ಒಟ್ಟು 1158 ಮತಗಟ್ಟೆಗಳಲ್ಲಿ ಚುನಾವಣೆ ನಡೆದಿದ್ದು, 6 ತಾಲ್ಲೂಕು ಕೇಂದ್ರಗಳಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದೆ. ಮೊದಲಿಗೆ ಎಸ್‌ಸಿ ಮಹಿಳೆ, ಎಸ್‌ಟಿ ಮಹಿಳೆ, ಒಬಿಸಿ ಮಹಿಳೆ ಮತ್ತು ಸಾಮಾನ್ಯ ಮಹಿಳಾ ಅಭ್ಯರ್ಥಿಗಳ ಫಲಿತಾಂಶ ಘೋಷಣೆ ಮಾಡಲಾಗುವುದು ಎಂದು ತಿಳಿಸಿದರು.

ಮತ ಎಣಿಕೆ ಕೇಂದ್ರದಲ್ಲಿ ಒಟ್ಟು 331 ಟೇಬಲ್‌ಗಳಗಳನ್ನು ವ್ಯವಸ್ಥೆ ಮಾಡಲಾಗಿದೆ. 331 ಎಣಿಕಾ ಮೇಲ್ವಿಚಾರಕರು, 32 ಹೆಚ್ಚುವರಿ ಎಣಿಕಾ ಮೇಲ್ವಿಚಾರಕರು ಹಾಗೂ 666 ಅಗತ್ಯವಿರುವ ಎಣಿಕ ಸಹಾಯಕರು, 66 ಹೆಚ್ಚುವರಿ ಎಣಿಕಾ ಸಹಾಯಕರು ಸೇರಿದಂತೆ, ಒಟ್ಟಾರೆ 1095 ಅಧಿಕಾರಿಗಳು, ಸಿಬ್ಬಂದಿಗಳನ್ನು ಮತ ಎಣಿಕಾ ಕಾರ್ಯಕ್ಕೆ ನೇಮಿಸಲಾಗಿದೆ. ಈಗಾಗಲೇ ಮತ ಎಣಿಕೆ ಕಾರ್ಯಕ್ಕೆ ನೇಮಕ ಆಗಿರುವ ಅಧಿಕಾರಿ ಮತ್ತು ಸಿಬ್ಬಂದಿಗೆ ಮೂರು ಬಾರಿ ತರಬೇತಿ ನೀಡಿ ತಯಾರಿ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ 187 ಗ್ರಾಮ ಪಂಚಾಯಿತಿಗೆ ನಡೆದ ಚುನಾವಣೆಯಲ್ಲಿ 7,65,118 ಮತದಾರರ ಪೈಕಿ 6,56, 426 ಮತದಾರರು ತಮ್ಮ ಮತ ಚಲಾಯಿಸಿದ್ದಾರೆ. 3,86,063 ಪುರುಷ ಮತದಾರರ ಪೈಕಿ 3,37,122 ಜನರು ಮತ ಚಲಾಯಿಸಿದ್ದಾರೆ. 3,79,055 ಮಹಿಳಾ ಮತದಾರರ ಪೈಕಿ 3,19,304 ಜನರು ಮತ ಚಲಾಯಿಸಿದ್ದಾರೆ ಎಂದು ವಿವರಿಸಿದರು.

**ಮತ ಎಣಿಕೆ ಕೇಂದ್ರಗಳು:** ಮತ ಎಣಿಕೆ ಕೇಂದ್ರಗಳಾಗಿ ದಾವಣಗೆರೆಯ ಮೋತಿ ವೀರಪ್ಪ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಜಗಳೂರಿನಲ್ಲಿ ಸರ್ಕಾರಿ ಜ್ಯೂನಿ (2ನೇ ಪುಟಕ್ಕೆ)

### ಸಮಾನ ಮತಗಳಾದರೆ ಲಾಟರಿ ಆಯ್ಕೆ: ಡಿಸಿ

**ಮತಗಳ ಎಣಿಕೆ ಮುಕ್ತಾಯದ ಬಳಿಕ ಅಭ್ಯರ್ಥಿಗಳ ನಡುವೆ ಸಮಾನ ಮತಗಳು ಇರುವುದು ಕಂಡರೆ, ಚುನಾವಣಾಧಿಕಾರಿಯು ಚೀಟಿ ಎತ್ತುವ ಮೂಲಕ ಅಭ್ಯರ್ಥಿಯ ಆಯ್ಕೆಯನ್ನು ನಿರ್ಣಯಿಸುವರು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.**

**ಒಂದು ವೇಳೆ ಮತ ಪತ್ರದಲ್ಲಿ ಗುರುತು ಮಾಡದೇ ಇರುವುದು, ಖಾಲಿ ಜಾಗದ ಮೇಲೆ ಗುರುತು ಮಾಡಿದಲ್ಲಿ, ಆಯ್ಕೆ ಮಾಡಬೇಕಾಗಿರುವ ಅಭ್ಯರ್ಥಿ** (2ನೇ ಪುಟಕ್ಕೆ)

### ಜಿಲ್ಲೆಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ನಿಷೇಧ

ದಾವಣಗೆರೆ, ಡಿ.29- ಕೋವಿಡ್ ಸೋಂಕು ಹರಡುವಿಕೆ ನಿಯಂತ್ರಿಸುವ ಹಿನ್ನೆಲೆಯಲ್ಲಿ ಸಾರ್ವಜನಿಕ ಸ್ಥಳ ಮತ್ತು ವಸತಿ ಸಮುಚ್ಛಯಗಳಲ್ಲಿ ಈ ಬಾರಿಯ ಹೊಸ ವರ್ಷದ ಸಂಭ್ರಮಾಚರಣೆಯನ್ನು ನಿಷೇಧ ಮಾಡಲಾಗಿದೆ.



ಹೊಸ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ಕೋವಿಡ್ ನಿಗಾವಣೆ ನಿಯಂತ್ರಣ ಮತ್ತು ಜಾಗ್ರತೆಗಾಗಿ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ನಾಳೆ ದಿನಾಂಕ 30ರ ಬುಧವಾರದಿಂದ ಜನವರಿ 2ರವರೆಗೆ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಸಾಮಾಜಿಕ ಅಂತರವಿಲ್ಲದೆ ಹೆಚ್ಚು ಜನರು ಸೇರುವ ವಿಶೇಷ ಯೋಜಿತ ಒಟ್ಟುಗೂಡುವಿಕೆ, ಡಿಜೆ, ಡ್ಯಾನ್ಸ್ ಕಾರ್ಯಕ್ರಮಗಳು, ವಿಶೇಷ ಪಾರ್ಟಿಗಳನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಪತ್ರಕರ್ತರಿಗೆ ತಿಳಿಸಿದರು.

ಹೊಸ ವರ್ಷಾಚರಣೆ ಸಂಬಂಧ ಸರ್ಕಾರ ಕಳೆದ ಡಿ. 17 ರಂದು ಮಾರ್ಗಸೂಚಿ ಹೊರಡಿಸಿದ್ದು, ಅದರನ್ವಯ ಕೋವಿಡ್-19 ಸೋಂಕು ತಡೆಗಟ್ಟಲು ಸಾರ್ವಜನಿಕರ ಹಸ್ತಲಾಘವ ಮತ್ತು ಆಲಿಂಗನ ನಿಷೇಧಿಸಿದೆ.

ಕ್ಲಬ್, ಪಬ್, ರೆಸ್ಟೋರೆಂಟ್‌ಗಳಲ್ಲಿ ಪ್ರತಿನಿತ್ಯದ ಚಟುವಟಿಕೆಗಳಂತೆ ತೆರೆದು, ನಡೆಸಲು ನಿರ್ಬಂಧ ವಿಧಿಸಿಲ್ಲ. ಹೊಸ ವರ್ಷಾಚರಣೆ ಸಂಬಂಧ ಸಾರ್ವಜನಿಕ ರಸ್ತೆ, ಮುಖ್ಯ ರಸ್ತೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರ ಸೇರುವಿಕೆ ಹಾಗೂ ಸಂಭ್ರಮಾ (2ನೇ ಪುಟಕ್ಕೆ)

# ರಾಜ್ಯದ ಬೆನ್ನಿಗೆ ಬಿದ್ದ ರೂಪಾಂತರಿ ವೈರಸ್

## ಇಂಗ್ಲೆಂಡ್‌ನಿಂದ ಬೆಂಗಳೂರಿಗೆ ಬಂದ ಮೂವರಲ್ಲಿ ಸೋಂಕು ಪತ್ತೆ

ಬೆಂಗಳೂರು, ಡಿ. 29- ಬ್ರಿಟನ್‌ನ ರೂಪಾಂತರಿ ಕೊರೊನಾ ಸೋಂಕು ರಾಜ್ಯದ ಬೆನ್ನಿಗೆ ಬಿದ್ದಿದೆ.

ಇಂಗ್ಲೆಂಡ್‌ನಿಂದ ಇತ್ತೀಚೆಗೆ ಬೆಂಗಳೂರಿಗೆ ಬಂದ ಮೂರು ಮಂದಿಯಲ್ಲಿ ಈ ಸೋಂಕು ಕಾಣಿಸಿಕೊಂಡಿರುವುದನ್ನು ಭಾರತೀಯ ವೈದ್ಯಕೀಯ ಪರಿಷತ್ -ಐಸಿಎಂಆರ್ ಖಚಿತಪಡಿಸಿದೆ.

ರಾಜ್ಯಕ್ಕೆ ಈ ರಾಷ್ಟ್ರದಿಂದ ಬಂದ 26 ಜನರಿಗೆ ಕೊರೊನಾ ಸೋಂಕು ತಗುಲಿತ್ತು, ಇವರನ್ನು ಸರ್ಕಾರಿ ಆಸ್ಪತ್ರೆಗಳಲ್ಲಿನ ಐಸೋಲೇಟೆಡ್ ಘಟಕದಲ್ಲಿ ಇರಿಸಿ, ಎಲ್ಲರಿಗೂ ಚಿಕಿತ್ಸೆ ನೀಡಲಾಗುತ್ತಿದೆ.

ಕೊರೊನಾ ಸೋಂಕು ದೃಢಪಟ್ಟ ತಕ್ಷಣವೇ ಇದು ರೂಪಾಂತರಿ ಸೋಂಕೇ ಎಂಬ ಬಗ್ಗೆ ಮಾಹಿತಿ ಪಡೆಯಲು ನಿಮ್ಹಾನ್ಸ್‌ನ ವಿಶೇಷ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಡಿಸಿ, ಎರಡು ದಿನಗಳ ಹಿಂದೆ ಐಸಿಎಂಆರ್‌ಗೆ ಕಳುಹಿಸಲಾಗಿತ್ತು.

ಇದರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೂ ಆಸ್ಪತ್ರೆ ಆಡಳಿತ ಮಂಡಳಿ ನೀಡಿರಲಿಲ್ಲ.

ವರದಿಯನ್ನು ಪರಿಶೀಲಿಸಿದ ನಂತರ ಐಸಿಎಂಆರ್, ಇಂದು ಬೆಳಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಿ, ತಾಯಿ ಮತ್ತು ಮಗು ಸೇರಿದಂತೆ 3 ಜನರಲ್ಲಿ ಹೊಸ ವೈರಾಣು ಕಂಡುಬಂದಿದೆ ಎಂದು ತಿಳಿಸಿರುವುದಲ್ಲದೆ, ಈ ಸೋಂಕಿಗೆ ಯಾವ ರೀತಿ ಚಿಕಿತ್ಸೆ ನೀಡಬೇಕು ಮತ್ತು ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಮುಂಜಾಗ್ರತೆ ಬಗ್ಗೆ ಸವಿವರವಾದ ಮಾಹಿತಿ ನೀಡಿದೆ.

ವರದಿ ರಾಜ್ಯ ಸರ್ಕಾರದ ಕೈ ಸೇರುತ್ತಿದ್ದಂತೆ, ಸೋಂಕಿತರ ಮನೆ ಮತ್ತು ಫ್ಲ್ಯಾಟ್ ಹಾಗೂ ಆ ಪ್ರದೇಶವನ್ನು ಸೀಲ್ ಡೌನ್ ಮಾಡಿ, ಸ್ಯಾನಿಟೈಸ್ ಮಾಡಲಾಗಿದೆ.

ಆ ಪ್ರದೇಶದ ಜನರಿಗೆ ಸ್ಥಳೀಯ ಬಿಬಿಎಂಪಿ ಆಡಳಿತದ ಆರೋಗ್ಯಾಧಿಕಾರಿಗಳು ಮಾಹಿತಿ ನೀಡಿ, ಎಚ್ಚರಿಕೆಯಿಂದ ಇರುವಂತೆ ಸೂಚಿಸಿದ್ದಾರೆ.

ಸೋಂಕಿತರ ಎರಡನೇ ಮತ್ತು ಮೂರನೇ ಸಂಪರ್ಕ ಹೊಂದಿದವರನ್ನು ಗುರುತಿಸಿ, ಅವರನ್ನೂ ಕೋವಿಡ್ ಪರೀಕ್ಷೆಗೆ (3ನೇ ಪುಟಕ್ಕೆ)


### ಎಲ್ಲಾ ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ವಂಶವಾಹಿ ಪರೀಕ್ಷೆ ನಡೆಸಲು ನಿರ್ಧಾರ

**ನವದೆಹಲಿ, ಡಿ.29 - ಇತ್ತೀಚೆಗೆ ಬ್ರಿಟನ್‌ನಿಂದ ಭಾರತಕ್ಕೆ ಬಂದ ಆರು ಜನರಲ್ಲಿ ರೂಪಾಂತರ ವೈರಸ್ ಇರುವುದು ಕಂಡುಬಂದ ಹಿನ್ನೆಲೆಯಲ್ಲಿ ಎಲ್ಲಾ ಅಂತರರಾಷ್ಟ್ರೀಯ ಪ್ರಯಾಣಿಕರಿಗೂ ವಂಶವಾಹಿ ಪರೀಕ್ಷೆ ಮಾದರಿ ನಡೆಸಲು ಭಾರತ ನಿರ್ಧರಿಸಿದೆ.**

**ಡಿಸೆಂಬರ್ 9 ರಿಂದ 22ರವರೆಗೆ ವಿದೇಶಗಳಿಂದ ಬಂದು ಕಳೆದ 14 ದಿನಗಳಲ್ಲಿ ಕೊರೊನಾ ವೈರಸ್ ಪಾಸಿಟಿವ್ ಬಂದ ಮತ್ತು ಅಂತಹ ಲಕ್ಷಣಗಳುಳ್ಳ ಎಲ್ಲಾ ಅಂತರರಾಷ್ಟ್ರೀಯ ಪ್ರಯಾಣಿಕರಲ್ಲಿ ರೂಪಾಂತರ ವೈರಸ್ ಇದೆಯೇ ಎಂಬ ಪರೀಕ್ಷೆ ನಡೆಸಲಾಗುತ್ತದೆ.**

**ಬ್ರಿಟನ್‌ನಲ್ಲಿ ಮೊದಲು ಪತ್ತೆಯಾದ ರೂಪಾಂತರ ವೈರಸ್ ದೀರ್ಘಾವಧಿಯಲ್ಲಿ ಅದರಾಚೆಗೂ ಹರಡಿದೆ ಎನ್ನುವುದು ಸ್ಪಷ್ಟವಾಗಿದೆ. ಇದು ಬೇರೆ ದೇಶಗಳಿಗೂ ವ್ಯಾಪಿಸಿದ್ದು, ಭಾರತಕ್ಕೆ ಬರುವವರಲ್ಲಿ ಕೂಡ ವೈರಸ್ ಕಾಣಿಸುವ ಸಾಧ್ಯತೆ ಇದೆ ಎಂದು ಈ ಕ್ರಮ ತೆಗೆದುಕೊಳ್ಳಲಾಗಿದೆ.**

# ವಾಹನಗಳಲ್ಲಿ ಏರ್ ಬ್ಯಾಕ್ ಕಡ್ಡಾಯಕ್ಕೆ ಕೇಂದ್ರ ಚಿಂತನೆ



ನವದೆಹಲಿ, ಡಿ.29- ವಾಹನಗಳ ಮುಂಭಾಗದ ಸೀಟ್ ಗಳಲ್ಲಿ ಏರ್ ಬ್ಯಾಕ್ ಕಡ್ಡಾಯ ಗೊಳಿಸುವುವ ಪ್ರಸ್ತಾವನೆ ಇರುವು ದಾಗಿ ಕೇಂದ್ರ ಸರ್ಕಾರ ಹೇಳಿದೆ. ಪ್ರಯಾಣಿಕರ ಸುರಕ್ಷತೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಈ ಕ್ರಮಕ್ಕೆ ಮುಂದಾಗಿದ್ದು, ರಸ್ತೆ ಸಾರಿಗೆ ಸಚಿವಾಲಯ ಈ ಸಂಬಂಧ ಅಧಿಸೂಚನೆಯ ಕರಡನ್ನು ತಯಾರಿಸಿದೆ ಎಂದು ಸಚಿವಾಲಯ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಹೊಸ ಕಾರು, ವಾಹನಗಳಲ್ಲಿ 2021ರ ಏಪ್ರಿಲ್ 1 ರಿಂದ ಪ್ರಸ್ತಾವಿತ ಕಾನೂನು ಜಾರಿಗೆ ತರುವುದಕ್ಕೆ ನಿರ್ಧರಿಸಲಾಗಿದ್ದು, ಈಗಿರುವ ಮಾದರಿಯ ವಾಹನಗಳಲ್ಲಿ ಜೂ.1, 2021 ರಿಂದ ಇದನ್ನು ಜಾರಿಗೆ ತರಬೇಕಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟವರಿಂದ ಸಲಹೆ, ಅಭಿಪ್ರಾಯಗಳನ್ನೂ ಸಚಿವಾಲಯ ಸಂಗ್ರಹಿಸಲು ಮುಂದಾಗಿದ್ದು, morth@gov.in ನಲ್ಲಿ 30 ದಿನಗಳ ಒಳಗಾಗಿ ಸಲ್ಲಿಸಬಹುದಾಗಿದೆ.

# ವಿಧಾನ ಪರಿಷತ್ ಉಪಸಭಾಪತಿ ಧರ್ಮೇಗೌಡ ಆತ್ಮಹತ್ಯೆ



ಬೆಂಗಳೂರು, ಡಿ. 29- ವಿಧಾನ ಪರಿಷತ್ತಿನ ಉಪಸಭಾಪತಿ ಎಸ್. ಎಲ್. ಧರ್ಮೇಗೌಡ (64) ಅವರು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಗುಣಸಾಗರ ಬಳಿ ಚಲಿಸುವ ರೈಲಿಗೆ ತಲೆ ಕೊಟ್ಟು ಸಾವಿಗೆ ಶರಣಾಗಿದ್ದಾರೆ. ಸಖರಾಯಪಟ್ಟಣದ ಬಳಿ ತೋಟದ ಮನೆಯಿಂದ ಸೋಮವಾರ ಸಂಜೆ ತಮ್ಮ ಗನ್ ಮ್ಯಾನ್ ಮತ್ತು ಆಪ್ತ ಸಿಬ್ಬಂದಿಯನ್ನು ದೂರವಿಟ್ಟು ಕಾರಿನಲ್ಲಿ ತೆರಳಿದ ಧರ್ಮೇಗೌಡ, ಬಹಳ ಹೊತ್ತಾದರೂ ಹಿಂದಿರುಗಿರಲಿಲ್ಲ.

ನಂತರ ಅವರ ಕುಟುಂಬದವರು ಮತ್ತು ರಕ್ಷಣಾ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ, ನಂತರ ಗುಣಸಾಗರ-ಕಬ್ಬಿ ರೈಲು ಮಾರ್ಗದ ಬಳಿ ಶವ ಪತ್ತೆಯಾಗಿದೆ. ಸಾವಿಗೆ ಶರಣಾಗುವ ಮುನ್ನ ಧರ್ಮೇಗೌಡರು ಡೆತ್ ನೋಟ್ ಬರೆದಿದ್ದು, ಅದಾದ ನಂತರ ತಮ್ಮ ಆಪ್ತ ಸ್ನೇಹಿತರ ಜೊತೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿದ್ದಾರೆ. ಈ ಸಂದರ್ಭದಲ್ಲೇ ಶತಾಬ್ದಿ (3ನೇ ಪುಟಕ್ಕೆ)

# ಸಾಹಿತ್ಯವನ್ನು ಜನರ ಮನೆಗೆ ಕೊಂಡೊಯ್ಯುವ ಕೆಲಸವಾಗಲಿ : ಡಾ. ಎಂ.ಜಿ.ಈಶ್ವರಪ್ಪ ಆಶಯ



ದಾವಣಗೆರೆ, ಡಿ.29- ಕನ್ನಡ ಸಾಹಿತ್ಯವನ್ನು ಅರಮನೆ, ಗುರುಮನೆಯಿದ ಜನರ ಮನೆಗೆ ಕೊಂಡೊಯ್ಯುವ ಕೆಲಸವನ್ನು ಕನ್ನಡ ಸಾಹಿತ್ಯ ಪರಿಷತ್ ನ ಜೊತೆಗೂಡಿ ನಾವೆಲ್ಲರೂ ಮಾಡಬೇಕಾಗಿದೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಂ.ಜಿ. ಈಶ್ವರಪ್ಪ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವರದಿಗಾರರ ಕೂಟ ಹಾಗೂ ಡಾ.ಎಂ.ಜಿ. ಈಶ್ವರಪ್ಪ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಮಾನವ ದಿನಾಚರಣೆ' ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಜನಪದ ಕಲಾವಿದರು ದಡ್ಡರಲ್ಲ. ಕಥೆ, ಕಾವ್ಯ, ಒಗಟುಗಳ ಮೂಲಕ ಮಾತನಾಡುವ ಜಾಣ್ಮೆ ಇರುವಂತಹ ಕಲಾವಿದರನ್ನು ಉಳಿಸಿಕೊಳ್ಳಲು ವಿಭಿನ್ನ ರೀತಿಯ ಪ್ರಯತ್ನಗಳ ಅಗತ್ಯವಿದೆ. ಈ ಕೆಲಸವು ಅಕಾಡೆಮಿಗಳು, ಸಂಘ-ಸಂಸ್ಥೆಗಳಿಂದಾಗಬೇಕಿದೆ ಎಂದು ಹೇಳಿದರು.

ಜನಪದ ಹಾಗೂ ರಂಗಭೂಮಿ ನನ್ನ ಆಸಕ್ತಿಯ ಕ್ಷೇತ್ರಗಳಾಗಿದ್ದವು. ಇದರ ಹೊರತಾಗಿಯೂ ಓರ್ವ ಶಿಕ್ಷಕನಾಗಿ ತನ್ನ ಶಿಷ್ಯ ಬಳಗದ ಸಹಕಾರದಿಂದ ಇತರೆ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡು ಸೇವೆ ಸಲ್ಲಿಸಲು ಸಾಧ್ಯವಾಯಿತು ಎಂದು ಹೇಳಿದರು.

ಸಮಾಜದ ಆರೋಗ್ಯ ಕಾಪಾಡುವ ಜವಾಬ್ದಾರಿ ಶಿಕ್ಷಕರದ್ದು. ಬೇರೆ ಕ್ಷೇತ್ರಗಳ ನೌಕರರಿಗೆ ಮಿತಿ ಇರುತ್ತದೆ. ಆದರೆ ಶಿಕ್ಷಕನಿಗೆ ಯಾವ ಮಿತಿಯೂ ಇರದು. ಆತ ಶಿಕ್ಷಕ ವೃತ್ತಿಯೊಂದಿಗೆ ಬೇರೆ ಯಾವ (3ನೇ ಪುಟಕ್ಕೆ)




**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 40x60 ಪೂರ್ವ, 30x40 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ, 40x50 ಪೂರ್ವ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾ ನಗರ 97421 44715

**ಸೈಟಗಳು ಮತ್ತು ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North, 3 ಬೆಡ್‌ರೂಂ ಮನೆ
ನವೋದಯ ಸ್ಕೂಲ್ ಹತ್ತಿರ 30x50 South, 30x40 North ಸೈಟ್‌ಗಳು ಮಾರಾಟಕ್ಕಿವೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಮನೆ ಮಾರಾಟಕ್ಕಿದೆ**
ದೇವರಾಜ ಅರಸು ಬಡಾವಣೆಯ EWS 'N' ಬ್ಲಾಕ್‌ನ 3ನೇ ಕ್ರಾಸ್‌ನಲ್ಲಿ 15x30 ಅಳತೆಯ ಪಶ್ಚಿಮ ದಿಕ್ಕಿನ ಬ್ಯಾಂಕ್ ಲೋನ್ ಸೌಲಭ್ಯವಿರುವ ಮನೆ ಮಾರಾಟಕ್ಕಿದೆ.
96203 83654
99454 54522

**ಸೈಟು ಮಾರಾಟಕ್ಕೆ (16 ಲಕ್ಷಕ್ಕೆ)**
ಕರ್ನಾಟಕ ಗೃಹ ಮಂಡಳಿ (KHB)
9x12 ಮೀ. (30x40 ಅಂದಾಜು) ಉತ್ತರ
9x12 ಮೀ. (30x40 ಅಂದಾಜು) ದಕ್ಷಿಣ
9x15 ಮೀ. (30x50 ಅಂದಾಜು) ದಕ್ಷಿಣ
9x15 ಮೀ. (30x50 ಅಂದಾಜು) ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, 30x57 ಪೂರ್ವ, ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x36 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ, ಶಿವಗಂಗಾ ಕಲ್ಯಾಣ ಮಂಟಪ ಹತ್ತಿರ 60x40 North west corner, 35x68 East, 30x40, North, 30x40 South
ಐನಹಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**3 ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತರಾಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ: 99026 88442

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 38½×40 ಪಶ್ಚಿಮ, ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ಬಾಲಾಜಿ ಲೇಔಟ್ 30×40 ದಕ್ಷಿಣ, ಪೂರ್ವ ಮನೆ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಬೇಕಾಗಿದ್ದಾರೆ**
ಅಕೌಂಟೆಂಟ್, ಸ್ಟೋರ್ ಮ್ಯಾನೇಜರ್, ಸೇಲ್ಸ್ ಎಕ್ಸಿಕ್ಯೂಟ್ ಹಾಗೂ ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ.
ಕಠಾರೆ ಆಪ್ಟಿಕಲ್ಸ್
ಸಿಟಿ ಸೆಂಟ್ರಲ್ ಆಸ್ಪತ್ರೆ ಹತ್ತಿರ, ದಾವಣಗೆರೆ.
93427 55314, 98448 44420

**ಸೈಟಗಳು ಮಾರಾಟಕ್ಕಿದೆ**
ಜಯನಗರದಲ್ಲಿ, ಸರಸ್ವತಿ ಬಡಾವಣೆಯಲ್ಲಿ 30x40 west, 30x50 East, 20x30 East, 30x40 South, ಸೆಮಿ ಕಮರ್ಷಿಯಲ್
ಐನಹಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
(ಹುಡುಗರು) ರೆಡಿಮೇಡ್ ಅಂಗಡಿಯಲ್ಲಿ 5 ವರ್ಷ ಅನುಭವವುಳ್ಳ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ವೇತನ ರೂ 8000 ದಿಂದ 10,000
ಶ್ರೀ ಗಣೇಶ್ ಹೊಸೈರಿ ಮಾರ್ಟ್
ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರೋಡ್, ದಾವಣಗೆರೆ
94482 07473

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**ಬಾಡಿಗೆಗೆ**
Godown APMC
27' x 95'
17 ft Height
87470 06444
94480 13082

**ತಕ್ಷಣ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ದಾವಣಗೆರೆಯಲ್ಲಿ ವಾಸಿಸುವವರು ಮಾತ್ರ
ಶೃತಿ ಗಾರ್ಮೆಂಟ್ಸ್
ಅಶೋಕ ರೋಡ್, ಶಾಂತಿ ಪಾರ್ಕ್ ಹತ್ತಿರ, ದಾವಣಗೆರೆ.
63606 56001
70228 43120

**ತಕ್ಷಣ ಬೇಕಾಗಿದ್ದಾರೆ**
Samson Distillery ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆಯ ಸುತ್ತಮುತ್ತಲಿನಲ್ಲಿ 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಲೇಡಿ ಸೆಕ್ಯೂರಿಟಿಗಳು ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ. ತಕ್ಷಣ ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳಾ ಅಭ್ಯರ್ಥಿಗಳು ಬಿಲ್ ಮಾಡಲು ಮತ್ತು ಪ್ಯಾಕ್ ಮಾಡಲು ಸಗಟು ಔಷಧಿ ಅಂಗಡಿಯಲ್ಲಿ ಬೇಕಾಗಿದ್ದಾರೆ.
ಭೇಟಿಯಾಗುವ ಸಮಯ: ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2

**FOR SALE**
15 Computer
(Led display)
Contact:
80951 15500

**ಮನೆ ಮಾರಾಟಕ್ಕಿದೆ**
ಎಸ್.ಓ.ಜಿ. ಕಾಲೋನಿ, ಸಿ ಬ್ಲಾಕ್, #36, ದಾವಣಗೆರೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಫೋ. : 89047 10839

**ಬೇಕಾಗಿದ್ದಾರೆ**
ಪ್ರಸಿದ್ದ ಬ್ಯುಟಿಕ್ (Boutique) ಗೆ ಮಹಿಳಾ/ಪುರುಷ ಕೆಲಸಗಾರರು ಎಮ್ಮಿಂಗ್/ಹುಕ್ ಹಾಗೂ ಫಿನಿಷಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ:
99800 32310

**ಬೇಕಾಗಿದ್ದಾರೆ**
ಕ್ಲಿನಿಕ್ ಕೆಲಸಕ್ಕೆ ನರ್ಸ್ ಬೇಕಾಗಿದ್ದಾರೆ.ಆಸಕ್ತಿ ಉಳ್ಳವರು ಸಂಪರ್ಕಿಸಿ:
73536 47383
63607 75402

**ಬೇಕಾಗಿದ್ದಾರೆ**
ಸ್ಟೀಲ್ ಫರ್ನೀಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹೆಂಗಸರು ಹಾಗೂ ಹುಡುಗರು ಬೇಕಾಗಿದ್ದಾರೆ.
ನ್ಯೂ ನಯನ ಫರ್ನೀಚರ್
ಮಂಡಿಪೇಟೆ, ದಾವಣಗೆರೆ
99017 16310

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಬೇಕಾಗಿದ್ದಾರೆ**
1) ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
ಪುರುಷರು ಹಾಗೂ ದ್ವಿಚಕ್ರ ವಾಹನವುಳ್ಳವರಿಗೆ ಆದ್ಯತೆ.
2) ಲ್ಯಾಬ್ ಟೆಕ್ನೀಷಿಯನ್
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ:
ಮಿತ್ರ ಹೈ-ಟೆಕ್ ಡಯಾಗ್ನೋಸ್ಟಿಕ್ ಸೆಂಟರ್
ಚಿರಂತನ, 4ನೇ ಮೇನ್, 9ನೇ ಕ್ರಾಸ್, ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗ, ನಂದಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 78928 44849

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನ ಹತ್ತಿರ
ಹದಡಿ ರೋಡ್
ದಾವಣಗೆರೆ.
ಫೋ. : 84315 68521

**Room For Rent**
Single Room attached booth room 14x14 ft, 2nd floor, 4th Main, 9th cross, P.J. Extenstion Davanagere
94489 29509

**REQUIRED**
* Mechanics - ITI / Diesel Mech /Fitter
* Helper Mech - SSLC / ITI
Vijaya Auto Sales and Service
Dealer for Eicher Truck & Buses
P.B.Road, Near DC Office, Davangere.
M : 94480-70098

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**Wholesale Price For School & Collage**
Sanitizer, Thermometer, variety N95 original Mask, Face shield, Sanitizer stand, latex gloves, sodium, all covid 19 Related products available in wholesale price.
Contact No. 93530-55008

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ತರಳಬಾಳು ಬಡಾವಣೆ, ವಿದ್ಯಾನಗರ, 1ನೇ ಮೇನ್, 5ನೇ ಕ್ರಾಸ್‌ನಲ್ಲಿ (#1627/19) ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
94486 97842

**ಆಹಾರ್ 2000**
ಕೋವಿಡ್ 19 ಪ್ರಯುಕ್ತ ಆಹಾರ್ 2000 ಕೇಕ್ ಪ್ರದರ್ಶನವನ್ನು ರದ್ದುಗೊಳಿಸಲಾಗಿದೆ. ಕೇಕ್ ಮಾರಾಟವು ಎಂದಿನಂತೆ ನಡೆಯುತ್ತದೆ.
ವ್ಯವಸ್ಥಾಪಕರು

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 31.12.2020ರ ಗುರುವಾರ ಮತ್ತು 01.01.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**New Batches Commenced**
VETA
Experts in Spoken English
93439 44659
98450 40493

**ನೇರ ಪರೀಕ್ಷೆಗಳು**
S.S.L.C., PUC, NTC, B.A, B.com, B.Sc, M.A. M.com, M.Sc, ಸರ್ಕಾರಿ ಕೆಲಸ/ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲ.
ಸಂಪರ್ಕಿಸಿ:- ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**JOBS**
MCS ACADEMY
Training & Placement Cell
98444 92888

**Wanted For Lecturer**
Physics, Chemistry Biology
Contact:
86601 95955
89706 81595

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**


ಬಂಧುಗಳೇ, ಸ್ನೇಹಿತರೇ, ನನ್ನ ಮಗನಾದ
ಶ್ರೀಯುತ ಎಂ.ಆರ್. ಶಿವಕುಮಾರ್
ಅವರು, ದಿನಾಂಕ 20.12.2020ನೇ ಭಾನುವಾರದಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಈ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ದಿನಾಂಕ 30.12.2020 ರಬುಧವಾರ ಮಧ್ಯಾಹ್ನ 12.30ಕ್ಕೆ ನಮ್ಮ ಸ್ವಗೃಹದಲ್ಲಿ ವೈಕುಂಠ ಸಮಾರಾಧನೆಯನ್ನು ಏರ್ಪಡಿಸಲಾಗಿದೆ. ಆದ ಕಾರಣ ತಾವೆಲ್ಲರೂ ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತ
ತಾಯಿ, ತಂಗಿ, ಪತ್ನಿ, ಪುತ್ರಿ, ಪುತ್ರ ಮತ್ತು ಅಪಾರ ಬಂಧು-ಬಳಗ
ವಿಳಾಸ :- # 3709/ A2 1ನೇ ಮುಖ್ಯರಸ್ತೆ ಆಂಜನೇಯ ಬಡಾವಣೆ, ದಾವಣಗೆರೆ.
ವಿ.ಸೂ: ಆಹ್ವಾನ ಪತ್ರಿಕೆ ತಲುಪದೆ ಇರುವವರು ಇದ್ದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

**ಪುಣ್ಯಸ್ಮರಣೆ**

ದಿ|| ಕೆ.ಜೆ. ನಾಗಭೂಷಣ್
(ಕೆ.ಟಿ. ಜಂಬಣ್ಣನವರ ಮಗ)
ಜನನ : 13.05.1954 ಮರಣ : 28.12.2017
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....
ಪತ್ನಿ : ಶ್ರೀಮತಿ ಲತಾ ನಾಗಭೂಷಣ್ ಕೆ.ಜೆ.
ಮಗ : ಶ್ರೀ ಕೆ.ಎನ್. ನಿಶ್ಚಯ್ ಸೊಸೆ : ಶ್ರೀಮತಿ ಚೈತ್ರ ಗೌರಿ,
ಮೊಮ್ಮಗ : ಕೆ.ಎನ್. ಓಂ
ಕಬ್ಬಿಣದವರು (ಕೆ.ಟಿ.ಜೆ. ವಂಶಸ್ಥರು), ನಗರದ ವಂಶಸ್ಥರು ಸಹೋದರ, ಸಹೋದರಿಯರು ಹಾಗೂ ಬಂಧು-ಮಿತ್ರರು

**ಶ್ರೀಮತಿ ಮಂಜುಳಮ್ಮ ನಿಧನ**

ಚಿತ್ರದುರ್ಗ ತಾಲ್ಲೂಕು ಭರಮಸಾಗರ ಹೋಬಳಿ ಹಂಪನೂರು ಗ್ರಾಮದ ವಾಸಿ ಶ್ರೀ ಷಡಾಕ್ಷರಪ್ಪ ಇವರ ಧರ್ಮಪತ್ನಿ
ಶ್ರೀಮತಿ ಮಂಜುಳಮ್ಮ (60)
ಅವರು ದಿನಾಂಕ 29.12.2020ರ ಮಂಗಳವಾರ ಸಂಜೆ 6.15ಕ್ಕೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 30.12.2020 ರಂದು 12 ಗಂಟೆಗೆ ಹಂಪನೂರು ಗ್ರಾಮದಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತರು
ಗೌಡ್ರು ದೊಡ್ಡಪ್ಪರ ಷಡಾಕ್ಷರಪ್ಪ ಮತ್ತು ಸಹೋದರರು
ಮಕ್ಕಳಾದ :- ಶ್ರೀಮತಿ ಗೀತಾ ಶ್ರೀ ಯಶವಂತ್ ಪಾಟೀಲ್
ಶ್ರೀಮತಿ ಲತಾ ಶ್ರೀ ಕುಮಾರ ಸ್ವಾಮಿ
ಶಿವನಗೌಡ ಪಾಟೀಲ್ ಮತ್ತು ಮೊಮ್ಮಕ್ಕಳು.

**ಜಿ.ಎನ್. ಷಣ್ಮುಖಪ್ಪ ನಿಧನ**

ಶ್ರೀಯುತ ಜಿ.ಎನ್. ಷಣ್ಮುಖಪ್ಪನವರು, ಗುಂಡೇರಿ
ನಿವೃತ್ತ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ.
ಶ್ರೀಯುತರು ದಿನಾಂಕ : 29.12.2020ರ ಮಂಗಳವಾರ ಬೆಳಿಗ್ಗೆ 6.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ಗುಂಡೇರಿಯಲ್ಲಿರುವ ಅವರ ತೋಟದಲ್ಲಿ ನೆರವೇರಿಸಲಾಯಿತು.
ಇಂತಿ ದುಃಖತಪ್ತ ಕುಟುಂಬ ವರ್ಗ :
ಪತ್ನಿ : ಶಾರದಮ್ಮ ಹಾಗೂ ಮಕ್ಕಳು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು, ಶ್ರೀ ರವಿ ಜಿ.ಎಸ್. ಮುಖ್ಯೋಪಾಧ್ಯಾಯರು, ಬಿ.ಇ.ಎ. ಕೇಂದ್ರೀಯ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ಪಿ.ಜೆ. ಬಡಾವಣೆ, ದಾವಣಗೆರೆ.

# ಹರಿಹರದಲ್ಲಿ ಮತ ಎಣಿಕೆಗೆ ಸಿದ್ಧತೆ



ಹರಿಹರ, ಡಿ.29- ಮೊನ್ನೆ ನಡೆದ ತಾಲ್ಲೂಕಿನ 23 ಗ್ರಾಮ ಪಂಚಾಯ್ತಿಗಳ ಚುನಾವಣೆಯ ಮತ ಎಣಿಕೆ ನಡೆಸಲು ನಗರದ ಹರಪನಹಳ್ಳಿ ರಸ್ತೆಯ ಸೇಂಟ್ ಮೇರಿಸ್ ಶಾಲೆಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಹರಿಹರ ತಾಲ್ಲೂಕಿನ ಚುನಾವಣಾ ನೋಡಲ್ ಅಧಿಕಾರಿ ಲೋಕೇಶ್ ಮಾಹಿತಿ ನೀಡಿದ್ದಾರೆ.

ಮತ ಎಣಿಕೆಯನ್ನು ನಗರದ ಸೇಂಟ್ ಮೇರಿಸ್ ಶಾಲೆಯ 9 ಕೊಠಡಿಗಳ ಸುಮಾರು 63 ಟೇಬಲ್‌ಗಳ ಮೇಲೆ ನಾಳೆ ಬುಧವಾರ ಬೆಳಿಗ್ಗೆ 8 ಗೆ ಪ್ರಾರಂಭವಾಗುತ್ತದೆ. ಮತ ಎಣಿಕೆ ಮೂರು ಸುತ್ತಿನಲ್ಲಿ ನಡೆಸಲಾಗುತ್ತದೆ.

ಮೊದಲ ಸುತ್ತಿನಲ್ಲಿ 8 ಗ್ರಾಮಗಳ ಎಣಿಕೆ ಮಾಡಲಾಗುತ್ತದೆ. ಮೊದಲ ಸುತ್ತಿನಲ್ಲಿ ಕುಣೆಬೆಳಕೆರೆ, ಸಿರಿಗೆರೆ, ಕುಂಬಳೂರು, ಹಾಲಿವಾಣ, ಕೊಂಡಜ್ಜಿ, ಬೆಳ್ಳೂಡಿ, ಎಳೆಹೊಳೆ ಗ್ರಾಮಗಳ ಮತ ಎಣಿಕೆ ಮಾಡಲಾಗುತ್ತದೆ.

ಎರಡನೇ ಸುತ್ತಿನಲ್ಲಿ ಭಾನುವಳ್ಳಿ, ನಂದಿಗಾವಿ, ಜಿಗಳಿ, ಕೊಕ್ಕನೂರು, ರಾಜನಹಳ್ಳಿ, ಯಲವಟ್ಟಿ, ಹರಳಹಳ್ಳಿ, ಕಡರನಾಯಕನಹಳ್ಳಿ, ಸಾಲಕಟ್ಟೆ ಸಾರಥಿ ಗ್ರಾಮಗಳ ಮತ ಎಣಿಕೆ ನಡೆಯಲಿದೆ. ಮೂರನೇ ಸುತ್ತಿನಲ್ಲಿ ಹನಗವಾಡಿ, ದೇವರಬೆಳಕೆರೆ, ಉಕ್ಕಡಗಾತ್ರಿ, ವಾಸನ, ಕೆ. ಬೇವಿನಹಳ್ಳಿ ಗ್ರಾಮಗಳ ಮತ ಎಣಿಕೆಯನ್ನು ನಡೆಸಲಾಗುತ್ತದೆ ಎಂದು ಅವರು ತಿಳಿಸಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಮತ ಎಣಿಕೆ ಕೇಂದ್ರಗಳಲ್ಲಿ ಒಬ್ಬರು ಮೇಲ್ವಿಚಾರಕರು, ಇಬ್ಬರು ಸಹಾಯಕ ಸಿಬ್ಬಂದಿ, ಆರು ಎಣಿಕೆ ಉಸ್ತುವಾರಿಗಳು, 200 ಜನ ಸಿಬ್ಬಂದಿ ಜೊತೆಗೆ ಪ್ರತಿ ಕೊಠಡಿಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಇರುತ್ತಾರೆ.

144ನೇ ಸೆಕ್ಷನ್ ಹೇರಲಾಗಿದ್ದು, 200 ಮೀಟರ್ ದೂರದಲ್ಲಿ ಸಾರ್ವಜನಿಕರು ಇರಬೇಕು. ಪಟಾಕಿ ಸಿಡಿಸಿ, ಜೈಕಾರ ಹಾಕಿ ಸಂಭ್ರಮ ಮಾಡುವಂತಿಲ್ಲ ಎಂದು ಹೇಳಿದರು.

# ಇಂದು ಪಂಚಾಯ್ತಿ ಫಲಿತಾಂಶ

(1ನೇ ಪುಟದಿಂದ) ಯರ್ ಕಾಲೇಜು, ಹೊನ್ನಾಳಿಯ ಗಂಗಮ್ಮ ವೀರಭದ್ರ ಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರ, ಹಿರೇಕಲ್ಮಠ, ನ್ಯಾಮತಿ ಶಿವಾನಂದಪ್ಪ ಬಡಾವಣೆ ರಸ್ತೆಯಲ್ಲಿನ ಕರ್ನಾಟಕ ಪಬ್ಲಿಕ್ ಸ್ಕೂಲ್, ಹರಿಹರದ ಹರಪನಹಳ್ಳಿ ರಸ್ತೆಯಲ್ಲಿನ ಸೇಂಟ್ ಮೇರಿಸ್ ಕ್ವಾನೆಂಟ್ ಶಾಲೆ, ಚನ್ನಗಿರಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಇವುಗಳನ್ನು ಸ್ಥಾಪಿಸ ಲಾಗಿದೆ ಎಂದು ತಿಳಿಸಿದರು.

**ಶಾಂತಿಯುತ ಮತದಾನ:** ದಾವಣಗೆರೆ ತಾಲ್ಲೂಕಿನ ಹೆಬ್ಬಾಳು-1 ಮತ್ತು 2ರ ಮತಗಟ್ಟೆಯಲ್ಲಿ ಮರು ಚುನಾವಣೆಯು ಮಂಗಳವಾರ ಶಾಂತಿಯುತವಾಗಿ ನಡೆಯಿತು. ಈ ಮತಗಟ್ಟೆ ಕೇಂದ್ರದಲ್ಲಿ ಮತದಾರರ ಪಟ್ಟಿ ಅದಲು-ಬದಲು ಆಗಿದ್ದರಿಂದ ಚುನಾವಣೆಯನ್ನು ಸ್ಥಗಿತಗೊಳಿಸ ಲಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಮತದಾನ ನಡೆಯಿತು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಜೀವ್ ಇದ್ದರು.

## ಲಾಟರಿ ಆಯ್ಕೆ: ಡಿಸಿ

**(1ನೇ ಪುಟದಿಂದ) ಗಳಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದಲ್ಲಿ, ಮತದಾರರನ್ನು ಗುರುತಿಸಿದ್ದಲ್ಲಿ, ಮತಪತ್ರವನ್ನು ವಿರೂಪಗೊಳಿಸಿದ್ದಲ್ಲಿ, ಮತಪತ್ರ ನೈಜವಾದುದಲ್ಲ ಎಂದು ಕಂಡು ಬಂದಲ್ಲಿ ಅಂತಹ ಮತಪತ್ರವನ್ನು ತಿರಸ್ಕರಿಸಲಾಗುವುದು ಎಂದರು.**

## ಜಿಲ್ಲೆಯಲ್ಲಿ ಹೊಸ ವರ್ಷ ನಿಷೇಧ

**(1ನೇ ಪುಟದಿಂದ)** ಚರಣೆ ನಿಷೇಧಿಸಿದೆ. ಆದರೆ ಈ ಸ್ಥಳಗಳಲ್ಲಿ ಪ್ರತಿ ನಿತ್ಯದ ಸಾಮಾನ್ಯ ಕಾರ್ಯಚಟುವಟಿಕೆ ಕೈಗೊಳ್ಳಲು ನಿರ್ಬಂಧವಿಲ್ಲ. 10 ವರ್ಷದೊಳಗಿನ ಮಕ್ಕಳು ಹಾಗೂ 65 ವರ್ಷ ಮೇಲ್ಪಟ್ಟ ಹಿರಿಯರು ಮನೆಯಲ್ಲಿಯೇ ಇರಬೇಕೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ಜಿಲ್ಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದ ಆದೇಶವನ್ನು ಯಥಾವತ್ತಾಗಿ ಜಾರಿಗೆ ತರುವ ಸಂಬಂಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ಸಾಮಾಜಿಕ ಅಂತರ ಇಲ್ಲದೇ ಹೆಚ್ಚಿನ ಜನರು ಸಾಮೂಹಿಕ ಕೂಟಗಳನ್ನು ಆಯೋಜನೆ ಮಾಡುವುದನ್ನು ನಿಷೇಧಿಸಿದೆ. ಸಾರ್ವಜನಿಕರು ಸರ್ಕಾರದ ಆದೇಶವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಹೇಳಿದರು.

ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಹೋಟೆಲ್, ಮಾಲ್, ಪಬ್, ರೆಸ್ಟೋರೆಂಟ್ ಇವುಗಳು ಎಂದಿನಂತೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಥರ್ಮಲ್ ಸ್ಕ್ರೀನಿಂಗ್, ಸ್ಯಾನಿಟೈಜರ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಆದರೆ, ಹೆಚ್ಚುವರಿ ಸಮಯದ ಅವಕಾಶ ಇರುವುದಿಲ್ಲ. ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಹಸಿರು ಪಟಾಕಿ ಮಾತ್ರ ಬಳಸಬೇಕು. ರಾತ್ರಿ 12.45ರ ಬಳಿಕ ಅನಗತ್ಯ ಓಡಾಟಕ್ಕೆ ಅವಕಾಶವಿಲ್ಲ ಎಂದರು.

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ಬಗ್ಗೆ ತೀವ್ರ ತಪಾಸಣೆ ನಡೆಸಲು ಕ್ರಮ ಕೈಗೊಂಡಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುನ್ನೆಚ್ಚರಿಸಿದರು.

**ಮತದಾನ ವೇಳೆ ನೀತಿ ಸಂಹಿತೆ ಉಲ್ಲಂಘನೆ: ಎಫ್ ಐಆರ್ :** ಗ್ರಾಮ ಪಂಚಾಯ್ತಿ ಚುನಾವಣೆಯ ಸಂದರ್ಭದಲ್ಲಿ ಓರ್ವ ವ್ಯಕ್ತಿಯ ವಿರುದ್ಧ ನೀತಿ ಸಂಹಿತೆ ದೂರ ಪ್ರಕರಣ ದಾಖಲಾಗಿದೆ. ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಅಭ್ಯರ್ಥಿಯೋರ್ವರ ಸಹೋದರ ಮತ ಕೇಂದ್ರದಲ್ಲಿ ತಾನು ಚಲಾಯಿಸಿದ ಮತಪತ್ರದ ಛಾಯಾಚಿತ್ರವನ್ನು ತೆಗೆದಿದ್ದರು. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಮತದಾನದ ಗೌಪ್ಯತೆ ಬಹಿರಂಗ ಪಡಿಸುವ ಕೆಲಸ ಆಗಿದೆ. ಹೀಗಾಗಿ, ಆ ವ್ಯಕ್ತಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

# ನಗರದಲ್ಲಿ ಇಂದು ಅಂಗವಿಕಲರಿಗೆ ಕಾನೂನು ಅರಿವು

ದಾವಣಗೆರೆ, ಡಿ.29- ಕರ್ನಾಟಕ ರಾಜ್ಯ ವಿಕಲಚೇತನರ ಆರ್.ಪಿ.ಡಿ. ಟಾಸ್ಕ್ ಫೋರ್ಸ್ ಜಿಲ್ಲಾ ಘಟಕದ ವತಿಯಿಂದ ನಾಳೆ ದಿನಾಂಕ 30ರ ಬುಧವಾರ ಅಂಗವಿಕಲರಿಗೆ ಕಾನೂನು ಅರಿವು ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟಾಸ್ಕ್ ಫೋರ್ಸ್‌ನ ರಾಜ್ಯ ಉಪಾಧ್ಯಕ್ಷರಾದ ಎಂ.ವಿಜಯಲಕ್ಷ್ಮಿ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ನಗರದ ಶ್ರೀ ಅಂಬಾ ಭವಾನಿ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10.30ಕ್ಕೆ ಆರಂಭವಾಗುವ ಕಾರ್ಯಕ್ರಮದಲ್ಲಿ ಜಿಲ್ಲಾ ನ್ಯಾಯಾಧೀಶ ಸಾಬಪ್ಪ ಅವರು ಮಾತನಾಡುವರು ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಹನುಮಂತರಾಯ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷರಾದ ಉಮಾ, ಉಪಾಧ್ಯಕ್ಷ ಅಶ್ರಫ್ ಅಲಿ, ಸದಸ್ಯ ಕೆ.ಎಂ. ನಟರಾಜ್, ಎನ್.ಜಿ. ಶಿವಪುತ್ರಪ್ಪ ಇತರರು ಉಪಸ್ಥಿತರಿದ್ದರು.

# ಮಯೂರ್‌ಗೆ ಪ್ರಶಸ್ತಿ



ದಾವಣಗೆರೆ, ಡಿ.29- ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಮತ್ತು ಅಲ್ಟ್ರಾಟೆಕ್ ವತಿಯಿಂದ ನೀಡುವ ಕನ್‌ಸ್ಟ್ರಕ್ಷನ್ ಎಕ್ಸಲೆನ್ಸಿ ಅವಾರ್ಡ್ಸ್-2000 ಪ್ರಶಸ್ತಿಗೆ ನಗರದ ಮಯೂರ್ ಕನ್ಸಲ್ಟೆನ್ಸಿ ಸರ್ವೀಸಸ್‌ನ ಸಿವಿಲ್ ಇಂಜಿನಿಯರ್ ಹೆಚ್.ಎನ್. ಮಯೂರ್ ಭಾಜನರಾಗಿದ್ದಾರೆ. ಮಯೂರ್ ಅವರು ಉತ್ತರ ಕರ್ನಾಟಕ ವಿಭಾಗದ (ದಾವಣಗೆರೆ ಜಿಲ್ಲೆ) 'ಔಟ್ ಸ್ಟ್ಯಾಂಡಿಂಗ್ ಕಾಂಕ್ರೀಟ್ ಸ್ಟ್ರಕ್ಚರ್-ರೆಸಿಡೆನ್ಷಿಯಲ್' ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದಾರೆ.

# ಕುಂಬಳೂರು : ಜ. 1 ರಿಂದ ಶಾಲೆ ಆರಂಭಕ್ಕೆ ತೀರ್ಮಾನ



ಮಲೇಬೆನ್ನೂರು, ಡಿ.29- ಕುಂಬಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರದ ಆದೇಶದಂತೆ ಜನವರಿ 1 ರಿಂದ ಶಾಲೆಯ ಆವರಣದಲ್ಲಿ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾಗಮ ತರಗತಿಗಳನ್ನು ಪ್ರಾರಂಭಿ ಸುವ ಬಗ್ಗೆ ಮಂಗಳವಾರ ಎಸ್‌ಡಿಎಂಸಿ ಪದಾಧಿಕಾರಿಗಳು ಹಾಗೂ ಪೋಷಕರು, ಶಿಕ್ಷಕರು ಸಭೆ ನಡೆಸಿದರು.

ಕೊರೊನಾ ಬಗ್ಗೆ ಜಾಗೃತಿ ವಹಿಸಿ, ಸುರಕ್ಷತಾ ಕ್ರಮಗಳನ್ನು ಕೈಗೊಂಡು ತರಗತಿಗಳನ್ನು ನಡೆಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕರಾದ ಶ್ರೀಮತಿ ಗೌರಮ್ಮ ಅವರು ಡಿ.31 ರಂದು ವಯೋನಿವೃತ್ತಿ ಹೊಂದಲಿರುವ ಹಿನ್ನೆಲೆಯಲ್ಲಿ ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಅವರು ಗೌರಮ್ಮ ಅವರನ್ನು ಸನ್ಮಾನಿಸಿ, ಗೌರವಿಸಿದರು.


ಎಸ್‌ಡಿಎಂಸಿ ಅಧ್ಯಕ್ಷ ಎಂ.ಹೆಚ್. ಶರಣ್, ಸದಸ್ಯರಾದ ದುರ್ಗಮ್ಮ, ಲಲಿ ತಮ್ಮ, ಕವಿತಾ, ಬೀರೇಶ್, ಹನುಮಂತ, ಭೀಮೇಶ್, ಹೆಚ್.ಎಂ. ಸದಾ ನಂದ್, ಶಿಕ್ಷಕಿಯರಾದ ನೇತ್ರಾವತಿ, ಸಾವಿತ್ರಮ್ಮ ಮೂಲಿಮನಿ, ಶೃತಿ ಮತ್ತು ಪೋಷಕರು ಈ ವೇಳೆ ಹಾಜರಿದ್ದರು.

# ಹಿರೇಎಮ್ಮಿಗನೂರಿನಲ್ಲಿ ಇಂದು ಹೂವಿನ ಅಡ್ಡಪಲ್ಲಕ್ಕಿ ಉತ್ಸವ

ಹೊಳಲ್ಕೆರೆ ತಾಲ್ಲೂಕು ಹಿರೇಎಮ್ಮಿಗನೂರು ಗ್ರಾಮದ ಶ್ರೀ ಕಲ್ಲೇಶ್ವರ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ ಹಾಗೂ ಹೂವಿನ ಅಡ್ಡಪಲ್ಲಕ್ಕಿ ಉತ್ಸವವು ಇಂದು ರಾತ್ರಿ 8 ಗಂಟೆಗೆ ಜರುಗಲಿದೆ.

ಹುಲ್ಲೂರು ಗ್ರಾಮದ ಭಕ್ತಾದಿಗಳಿಂದ ಶ್ರೀ ಕಲ್ಲೇಶ್ವರ ಸ್ವಾಮಿಯ ಹೂವಿನ ಪಲ್ಲಕ್ಕಿ ಅಲಂಕಾರ ಮತ್ತು ಭಜನೆ, ಶಾಂತಪ್ಪ ಭೀಮಸಮುದ್ರ ಇವರಿಂದ ಶ್ರೀ ಆಂಜನೇಯ ಸ್ವಾಮಿ ಹೂವಿನ ಪಲ್ಲಕ್ಕಿ ಅಲಂಕಾರ, ವಡೇರಹಳ್ಳಿ ಶೇಖರಪ್ಪ ಮತ್ತು ಮಕ್ಕಳು (ದಾವಣಗೆರೆ) ಇವರಿಂದ ಕದಳಿ ಮಂಟಪಕ್ಕೆ ದೀಪಾಲಂಕಾರ, ಕೆ.ಆರ್. ಶಿವಯೋಗಿ (ಹಿರೇಎಮ್ಮಿಗನೂರು) ಸೇವಾ ಕಾರ್ಯಕರ್ತರಾಗಿದ್ದು, ಹುಲ್ಲೂರು ಗ್ರಾಮಸ್ಥರಿಂದ ದಾಸೋಹ ನಡೆಯಲಿದೆ.

# ಅಣಬೂರು ಕೃಷಿ ಪತ್ತಿನ ಸಹಕಾರ ಸಂಘದ ಸಭೆ



ಜಗಳೂರು, ಡಿ. 29- ಸಾಲ ವಿತರಣೆ ಹಾಗೂ ಫಲಾನುಭವಿಗಳ ಆಯ್ಕೆಯಲ್ಲಿ ಮತ್ತು ಹಣಕಾಸಿನ ಅವ್ಯವಹಾರದ ಬಗ್ಗೆ ದೂರುಗಳಿದ್ದು, ಸಮಗ್ರ ತನಿಖೆಯಾಗಬೇಕು ಎಂದು ಅಣಬೂರು ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಎಲ್ಲಾ ನಿರ್ದೇಶಕರು ಒತ್ತಾಯಿಸಿದ್ದಾರೆ.

ಎಲ್ಲಾ ರೈತರಿಗೆ ಸಾಲ ಸೌಲಭ್ಯ ಕಲ್ಪಿಸಿಲ್ಲ, ಆಯ್ದ ಕೆಲವು ರೈತರಿಗೆ ಮಾತ್ರ ಪ್ರತಿ ವರ್ಷ ಸಾಲ ವಿತರಿಸಲಾಗಿದೆ. ಸಾಲ ವಿತರಣೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಬೇಕಾಬಿಟ್ಟಿ ಷೇರು ಹಣ ವಸೂಲಿ ಮಾಡಲಾಗುತ್ತಿದೆ. ಸಾಲ ಪಡೆದ ರೈತರು ಎಟಿಎಂ ಕಾರ್ಡ್ ಹಾಗೂ ಪಾಸ್ ಪುಸ್ತಕಗಳನ್ನು ಸಂಬಂಧಪಟ್ಟ ರೈತರಿಗೆ ಕೊಡದೇ ಸಹಕಾರ ಸಂಘದಲ್ಲಿ ಅಕ್ರಮವಾಗಿ ಇಟ್ಟುಕೊಳ್ಳಲಾಗಿದೆ. ಇದು ಅವ್ಯವಹಾರಕ್ಕೆ ಕಾರಣವಾಗುತ್ತದೆ ಎಂದು ಅಣಬೂರು, ಜ್ಯೋತಿಪುರ, ಅಣಬೂರು ಗೊಲ್ಲರಹಟ್ಟಿ ಗ್ರಾಮದ ಹಲವು ರೈತರು ಆರೋಪಿಸಿದರು.

ನಿರ್ದೇಶಕ ಅಣಬೂರು ಮಠದ ಕೊಟ್ರೇಶ್ ಮಾತನಾಡಿ, ಈ ಹಿಂದೆ ಸಾಕಷ್ಟು ವ್ಯತ್ಯಾಸಗಳಾಗಿವೆ. ಈ ಬಾರಿ ರೈತರಿಗೆ ಅನ್ಯಾಯವಾಗದಂತೆ ಸಾಲವನ್ನು ದಾಖಲೆಗಳನ್ನು ಆಧರಿಸಿ ಸೌಲಭ್ಯ ಕಲ್ಪಿಸಿ ಕೊಡಲಾಗುವುದು ಎಂದು ತಿಳಿಸಿದರು.

ಸಂಘದ ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ್ ಮಾತನಾಡಿ, ರೈತರಿಗೆ ನೇರವಾಗಿ ಸಾಲದ ಹಣ ಜಮಾ ಆಗುವುದಿಲ್ಲ. ಸಂಘದ ಖಾತೆಗೆ ಜಮಾ ಆಗಿ ನಂತರ ರೈತರ ಖಾತೆಗೆ ಜಮಾ ಆಗುತ್ತದೆ. ಎಟಿಎಂ ತಾಂತ್ರಿಕ ಸಮಸ್ಯೆಯಿದ್ದು, ಶೀಘ್ರವೇ ಸಾಲದ ರೈತರಿಗೆ ವಿತರಿಸಲಾಗುವುದು ಎಂದರು.

ಸಹಕಾರ ಸಂಘದ ಅಧ್ಯಕ್ಷ ಸಣ್ಣಕಾಟಪ್ಪ, ಉಪಾಧ್ಯಕ್ಷ ಬಸವರಾಜ್, ನಿರ್ದೇಶಕರಾದ ಎಂ. ತಿಪ್ಪೇಸ್ವಾಮಿ, ಗುಡ್ಡಪ್ಪ, ಎನ್. ಬೋರೇಶ್, ನೀಲಪ್ಪ, ಶಾಂತಮ್ಮ, ಭಾಗ್ಯಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಜ. 3ಕ್ಕೆ ನಂದಿ ಸೌಹಾರ್ದ ಚುನಾವಣೆ

## 14 ಸ್ಥಾನಗಳಿಗೆ 29 ಅಭ್ಯರ್ಥಿಗಳು, 1 ಸ್ಥಾನ ಅವಿರೋಧ ಆಯ್ಕೆ

ಮಲೇಬೆನ್ನೂರು, ಡಿ.29- ಇಲ್ಲಿನ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತದ ಆಡಳಿತ ಮಂಡಳಿಗೆ ಜನವರಿ 3 ರಂದು ಚುನಾವಣೆ ನಡೆಯಲಿದೆ.

ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಸೋಮವಾರ ಅವಿರೋಧ ಆಯ್ಕೆಗೆ ಎರಡೂ ಗುಂಪುಗಳ ಮಧ್ಯೆ ಮಾತುಕತೆ ನಡೆಯಿತಾದರೂ, ಒಮ್ಮತದ ತೀರ್ಮಾನಕ್ಕೆ ಬಾರದ ಕಾರಣ ಚುನಾವಣೆ ನಡೆಯುವಂತಾಯಿತು.

ಆಡಳಿತ ಮಂಡಳಿಯ ಒಟ್ಟು 15 ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಹಳ್ಳಿಹಾಳ್ ಗ್ರಾಮದ ಎ.ಕೆ. ತಿಪ್ಪೇಶಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಳಿದ 9 ಸಾಮಾನ್ಯ ಕ್ಷೇತ್ರಗಳಿಗೆ 21 ಅಭ್ಯರ್ಥಿಗಳು, 2 ಮಹಿಳಾ ಮೀಸಲು ಕ್ಷೇತ್ರಗಳಿಗೆ 3 ಅಭ್ಯರ್ಥಿಗಳು, 2 ಬಿಸಿಎಂ 'ಎ' ಕ್ಷೇತ್ರಗಳಿಗೆ 3 ಅಭ್ಯರ್ಥಿಗಳು ಮತ್ತು 1 ಪರಿಶಿಷ್ಟ ಪಂಗಡ ಮೀಸಲು ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

ಮೊದಲಿಗೆ ಒಟ್ಟು 57 ನಾಮಪತ್ರ ಸಲ್ಲಿಕೆಯಾಗಿದ್ದವು. 27 ನಾಮಪತ್ರ ಹಿಂಪಡೆದಿದ್ದರಿಂದ 30 ನಾಮಪತ್ರಗಳು ಉಳಿದಿದ್ದವು. ಅದರಲ್ಲಿ ಎಸ್ಸಿ ಮೀಸಲು ಅಭ್ಯರ್ಥಿ ಅವಿರೋಧ ಆಯ್ಕೆಯಾದ ಕಾರಣ 29 ಅಭ್ಯರ್ಥಿಗಳು ಅಂತಿಮವಾಗಿ ಉಳಿದುಕೊಂಡಿದ್ದಾರೆ.

ಮರು ಆಯ್ಕೆ ಬಯಸಿ ಜಿಗಳಿಯ ಇಂದೂಧರ್, ಜಿ.ಎಂ. ವಿಜಯಕುಮಾರ್, ಮಲೇಬೆನ್ನೂರಿನ ಬಿ. ವೀರಯ್ಯ, ಎ. ಆರೀಫ್ ಅಲಿ, ಹಳ್ಳಿಹಾಳ್ ಹೆಚ್. ವೀರನಗೌಡ ಅವರು ಚುನಾವಣಾ ಕಣದಲ್ಲಿದ್ದು, ಜಿಗಳಿಯ ಗೌಡ್ರ ಬಸವರಾಜಪ್ಪ, ಎಂ.ವಿ. ನಾಗರಾಜ್, ಕೊಕ್ಕನೂರಿನ ಕೆ.ಪಿ. ಆಂಜನೇಯ, ಬಿ.ಹೆಚ್. ರವಿ ಪಾಟೀಲ್, ಡಿ.ಜಿ. ಸಿದ್ದಪ್ಪ, ಟಿ. ರಾಮಚಂದ್ರಪ್ಪ ಹಳ್ಳಿಹಾಳ್‌ನ ಹೆಚ್.ಟಿ. ಶಾಂತನಗೌಡ, ಹೆಚ್.ಟಿ. ಪರಮೇಶ್ವರಪ್ಪ, ಹೆಚ್.ಬಿ. ಪ್ರಕಾಶ್, ಜಿ. ಬೇವಿನಹಳ್ಳಿಯ ಬಿ.ಎಸ್. ರಂಗಪ್ಪ, ಸಂತೋಷ್ ಪಾಳೇದ ಸೇರಿದಂತೆ 24 ಜನ ಅಭ್ಯರ್ಥಿಗಳು ಹೊಸದಾಗಿ ಆಯ್ಕೆಯಾಗಲು ಸ್ಪರ್ಧೆ ಮಾಡಿದ್ದಾರೆ.

# ದೇಶದ ವಿಕಾಸಕ್ಕಾಗಿ ಕಾಲಕ್ಕೆ ತಕ್ಕಂತೆ ಕಾಂಗ್ರೆಸ್ ಶ್ರಮಿಸಿದೆ

## ಕಾಂಗ್ರೆಸ್ ಪಕ್ಷದ 136ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಎಂ.ಪಿ. ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ,ಡಿ.29- ಕಾಂಗ್ರೆಸ್ ಪಕ್ಷವು ತ್ಯಾಗ, ಬಲಿದಾನದ ಮೂಲಕ ಕಟ್ಟಿದಂತಹ ಪಕ್ಷವಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಕಾಂಗ್ರೆಸ್ ಮಹನೀಯರು ತಮ್ಮ ಪ್ರಾಣವನ್ನೇ ಒತ್ತೆ ಇಟ್ಟಿದ್ದಾರೆ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಪಕ್ಷದ 136ನೇ ಸಂಸ್ಥಾಪನಾ ದಿನವನ್ನು ಸಮರ್ಪಣಾ ದಿನವನ್ನಾಗಿ ಆಚರಿಸಲಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹುತೇಕ ಕಾಂಗ್ರೆಸ್ಸಿಗರು ದೇಶಕ್ಕಾಗಿ ಪ್ರಾಣ ಕೊಟ್ಟಿದ್ದಾರೆ. ಆಯಾ ಕಾಲಕ್ಕೆ ತಕ್ಕ ಬೇಡಿಕೆಯಂತೆ ಹೋರಾಟಗಳನ್ನು ಮಾಡಿ ರಾಜಕೀಯ ಮತ್ತು ಆರ್ಥಿಕ, ಸಾಮಾಜಿಕ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ. ಇದು ಕೆಲವೇ ಜನರ ಪಕ್ಷವಲ್ಲ. ಇದೊಂದು ದೇಶದ ಜನರೇ ನಡೆಸುತ್ತಿರುವ ಪಕ್ಷವಾಗಿದೆ. ಆದರೂ, ಬಿಜೆಪಿ ಮತ್ತು ಸಂಘ ಪರಿವಾರದವರು ಕಾಂಗ್ರೆಸ್ ಏನು ಮಾಡಿದೆ, ಏನು ಮಾಡಿದೆ ಎಂದು ಪ್ರಶ್ನಿಸುತ್ತಾರೆ. ಇವರಿಗೆ ಕಾಂಗ್ರೆಸ್ ಕೊಡುಗೆ ಕಾಣುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಸಾಮಾಜಿಕ ನ್ಯಾಯದಡಿ ಸ್ಥಾಪಿತವಾಗಿರುವ ಕಾಂಗ್ರೆಸ್ ಪಕ್ಷವು ಇಂದಿಗೂ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗದ ಹಿತ ಕಾಯುವ ಕೆಲಸ ಮಾಡುತ್ತಿದೆ. ದೇಶಕ್ಕೆ ಕಾಂಗ್ರೆಸ್ ಪಕ್ಷ ಅಪಾರ ಕೊಡುಗೆ ನೀಡಿದೆ. ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು ಮನಮೋಹನ ಸಿಂಗ್ ಅವರವರೆಗೂ ದೇಶದ ಸಮಗ್ರ ವಿಕಾಸಕ್ಕಾಗಿ ಕಾಲಕ್ಕೆ ತಕ್ಕಂತೆ ಶ್ರಮಿಸಿದೆ. ಕಾಂಗ್ರೆಸ್ ಪಕ್ಷವೊಂದೇ ದೇಶದ ಬದ್ಧತೆ ಮತ್ತು ಸಮಗ್ರತೆಗಾಗಿ ಚಿಂತನೆ ಮಾಡಿ ಪಕ್ಷದ ನಾಯಕರು ಕೆಲಸ ಮಾಡಿದ್ದಾರೆ ಎಂದರು.

ಬ್ರಿಟಿಷರಿಂದ ದೇಶವನ್ನು ಮುಕ್ತ ಮಾಡುವಾಗಲೂ ನಮ್ಮ ನಾಯಕರು ತಮ್ಮ ಜೀವವನ್ನೇ ಬಲಿದಾನ ಮಾಡಿದ್ದಾರೆ. ಬಿಜೆಪಿಯವರು ನಮ್ಮ ದೇಶ, ನಾವು ಹಿಂದೂ ಎನ್ನುವ ಹೆಸರಿನಲ್ಲಿ ರಾಜಕೀಯ ಮಾಡಿ ಜನರಲ್ಲಿರುವ ಒಗ್ಗಟ್ಟು ಹೊಡೆಯುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಲೇ ಬರುತ್ತಿದ್ದಾರೆ ಎಂದು ದೂರಿದರು.

ತಾ.ಪಂ ಮಾಜಿ ಸದಸ್ಯೆ ಕಂಚಿಕೇರಿ ಜಯಲಕ್ಷ್ಮಿ, ರವಿ ಯುವ ಶಕ್ತಿ ಅಧ್ಯಕ್ಷ ಉದಯ ಶಂಕರ್, ಕಾರ್ಯದರ್ಶಿ ಮತ್ತೂರು ಬಸವ ರಾಜ್, ಮುಖಂಡರಾದ ಮಟ್ಟೇರ ಮುತ್ತಣ್ಣ, ಉಮಾಶಂಕರ್, ಸುಧಾ, ಹಾಲಮ್ಮ, ಯಡಿಹಳ್ಳಿ ರಾಜೇಂದ್ರ, ಬಾಗಳಿ ಹರ್ಷವರ್ಧನ್, ಕೊಟ್ರೇಶ್, ಅಲ್ಮರಸೀಕೆರೆ ಮಂಜುನಾಥ್, ಬಾಗಳಿ ಕೊಟ್ರೇಶ್, ಅಡವಿಹಳ್ಳಿ ಪೂಜಾರ್ ರಾಜು, ಚಿಕ್ಕಹಳ್ಳಿ ಶಿವರಾಜ್, ಮಂಜಣ್ಣ, ಆನಂದ್, ಎಂ.ಶಿವರಾಜ್, ನಾಗರಾಜ್, ವಿ.ಹನುಮಂತ, ಪಿ.ಬಸವರಾಜ್, ಸುನೀಲ್, ಜಿ.ಮಂಜುನಾಥ, ಅಂಜಿನಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಮನೆಗೆ ಕೊಂಡೊಯ್ಯುವ ಕೆಲಸವಾಗಲಿ

**(1ನೇ ಪುಟದಿಂದ)** ಕಾರ್ಯವನ್ನಾದರೂ ಮಾಡಲು ಸಾಧ್ಯವಿದೆ. ಆ ಸಾಧ್ಯತೆಯನ್ನು ನಾನು ಬಳಸಿಕೊಂಡಿದ್ದೇನೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ, ಜಾನಪದ ವಿದ್ವಾಂಸರೂ ಆದ ಡಾ.ಬಸವರಾಜ ನೆಲ್ಲಿಸರ ಮಾತನಾಡಿ, ಯೋಗ್ಯತೆ ಹುಟ್ಟಿನೊಂದಿಗೆ ಬರುವುದಿಲ್ಲ. ಬಾಳುವ ಕ್ರಮದಿಂದ ರೂಪುಗೊಳ್ಳುವಂತದ್ದು. ತಮ್ಮ ವೃತ್ತಿಯನ್ನು ಸಮಾಜದ ಒಳಿತಿಗೆ ಹೇಗೆ ಬಳಸಿಕೊಳ್ಳಬೇಕೆಂಬುದಕ್ಕೆ ಈಶ್ವರಪ್ಪ ಉತ್ತಮ ಉದಾಹರಣೆ ಎಂದರು.

ಈಶ್ವರಪ್ಪನವರ ನಡೆ-ನುಡಿಯಲ್ಲಿ ಜನಪದ ಸಾಹಿತ್ಯದ ಮಹಾ ದಿಬ್ಬಣವೇ ನಡೆದಂತೆ. ಸಭ್ಯತೆ, ಸರಳತೆ ಮೈಗೂಡಿಸಿಕೊಂಡು, ಮುತ್ತಿನ ಹಾರದಂತಹ ನುಡಿಗಳನ್ನಾಡುವ ಈಶ್ವರಪ್ಪ ಅವರು ಚಿಂತನ ಶೀಲ, ಚಲನ ಶೀಲ ವ್ಯಕ್ತಿ ಎಂದು ಬಣ್ಣಿಸಿದರು.

ಮಹಾನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ಸದಸ್ಯರೂ, ಸಾಹಿತಿಯೂ ಆದ ಬಾ.ಮ. ಬಸವರಾಜಯ್ಯ ಅಭಿನಂದನಾ ನುಡಿಗಳನ್ನಾಡುತ್ತಾ, ಯಾವುದೇ ವಿಷಯವನ್ನು ವಿಷಯಾಂತರಗೊಳಿಸದೆ ಕೊಟ್ಟ ಸಮಯದಲ್ಲಿಯೇ ಮಾತನಾಡಿ ಮುಗಿಸುವ ಜ್ಞಾನ ಭಂಡಾರ ಈಶ್ವರಪ್ಪ ಅವರಲ್ಲಿದೆ ಎಂದರು.

ಶಿಕ್ಷಣ ಕ್ಷೇತ್ರದಲ್ಲಿನ ಸೇವೆ ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆಯಾದರೂ, ಈಶ್ವರಪ್ಪ ಅವರು ಕೇವಲ ಶಿಕ್ಷಣ ಕ್ಷೇತ್ರಕ್ಕೇ ಸೀಮಿತವಲ್ಲ, ಅವರ ಲೋಕ ವಿಸ್ತಾರವಾದದ್ದು. ರಾಜ್ಯೋತ್ಸವ ಪ್ರಶಸ್ತಿಗೆ ಗೌರವ ತಂದುಕೊಟ್ಟವರು ಈಶ್ವರಪ್ಪ ಎಂದರು. ಇದೇ ವೇಳೆ ಶಿವು ಆಲೂರು ವಿರಚಿತ 'ಒಡಲ ಉಸಿರು' ಚೊಚ್ಚಲ ಕೃತಿ ಬಿಡುಗಡೆ ಮಾಡಲಾಯಿತು. ಕೃತಿಯ ಬಗ್ಗೆ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಅಧ್ಯಕ್ಷತೆ ವಹಿಸಿದ್ದರು. ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಸಾಪ ನಿಕಟ ಪೂರ್ವ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ಕವಿ ಶಿವು ಆಲೂರು ಉಪಸ್ಥಿತರಿದ್ದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ ಸ್ವಾಗತಿಸಿದರು. ಎನ್.ಎಸ್. ರಾಜು ನಿರೂಪಿಸಿದರು. ಜಿ.ಆರ್. ಷಣ್ಮುಖಪ್ಪ ವಂದಿಸಿದರು. ಶ್ರೀಮತಿ ಸಂಗೀತ ರಾಘವೇಂದ್ರ ಕುವೆಂಪು ಗೀತಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

# ರಾಜ್ಯದ ಬೆನ್ನಿಗೆ ಬಿದ್ದ ರೂಪಾಂತರಿ ವೈರಸ್

**(1ನೇ ಪುಟದಿಂದ)** ಒಳಪಡಿಸುವುದಲ್ಲದೆ ಕ್ವಾರಂಟೈನ್ ಮಾಡಲಾಗುತ್ತಿದೆ.

ಐರೋಪ್ಯ ರಾಷ್ಟ್ರಗಳು ಸೇರಿದಂತೆ ವಿವಿಧ ದೇಶಗಳಿಂದ ಕಳೆದ ಮೂರು ವಾರಗಳಿಂದ ರಾಜ್ಯಕ್ಕೆ ಬಂದಿರುವವರನ್ನು ಸೋಂಕು ಪತ್ತೆ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದರಲ್ಲಿ ಇನ್ನೂ ಕೆಲವರ ಪರೀಕ್ಷೆ ಫಲಿತಾಂಶ ಬರಬೇಕಿದೆ. ರಾಷ್ಟ್ರದಲ್ಲಿ ಇದುವರೆಗೆ ಆರು ಮಂದಿಯಲ್ಲಿ ಹೊಸ ಸೋಂಕು ಪತ್ತೆಯಾಗಿದ್ದು ಇವರಲ್ಲಿ ಮೂರು ಮಂದಿ ಕರ್ನಾಟಕದವರೇ ಆಗಿದ್ದಾರೆ.

ಬಹುತೇಕ ಕೋವಿಡ್ ಲಕ್ಷಣಗಳೇ ಈ ಸೋಂಕಿತರಲ್ಲಿಯೂ ಕಂಡುಬಂದಿದೆ, ಆದರೆ ಕೊರೊನಾಗಿಂತ ಈ ಸೋಂಕು ಹರಡುವ ವೇಗ ತೀವ್ರವಾಗಿರುತ್ತದೆ. ಕೋವಿಡ್ ತಡೆಗೆ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯೋ, ಅದನ್ನೇ ಮುಂದುವರೆಸುವಂತೆ ತಜ್ಞ ವೈದ್ಯರು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ.

ಇಂಗ್ಲೆಂಡ್‌ನಿಂದ 2,127 ಪ್ರಯಾಣಿಕರು ಇದುವರೆಗೆ ರಾಜ್ಯಕ್ಕೆ ಆಗಮಿಸಿದ್ದು, ಅವರಲ್ಲಿ 1,614 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ.

ಇವರಲ್ಲಿ 26 ಮಂದಿಯಲ್ಲಿ ಕೊರೊನಾ ಸೋಂಕು ಕಂಡುಬಂದಿದ್ದು, ಇನ್ನೂ ಕೆಲವರ ವರದಿ ಬರಬೇಕಿದೆ.

ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ಖಚಿತ ಪಡಿಸಿದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ಬ್ರಿಟನ್‌ನಲ್ಲಿ ಕಾಣಿಸಿಕೊಂಡಿರುವ ಎರಡನೇ ಮಾದರಿ ಸೋಂಕು ರಾಜ್ಯದಲ್ಲಿ ಹರಡದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದೇವೆ ಎಂದರು.


ಈ ಸಂಬಂಧ ಕೇಂದ್ರದ ಮಾರ್ಗಸೂಚಿಗಳನ್ನು ಅನುಸರಿಸುತ್ತಿದ್ದೇವೆ, ಬ್ರಿಟನ್‌ನಿಂದ ಬಂದ ಎಲ್ಲಾ ಪ್ರಯಾಣಿಕರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ, ಅವರಲ್ಲಿ 208 ಮಂದಿ ಪರೀಕ್ಷೆಗೆ ಒಳಪಡದೆ ನಾಪತ್ತೆಯಾಗಿದ್ದಾರೆ, ಅವರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಪೊಲೀಸರು ನಿರತರಾಗಿದ್ದಾರೆ.

ರಾಜ್ಯ ಸರ್ಕಾರ ಈ ವಿಷಯದಲ್ಲಿ ಎಲ್ಲಿಯೂ ಎಡವಿಲ್ಲ, ಕೇಂದ್ರದ ಮಾಹಿತಿ ಬರುತ್ತಿದ್ದಂತೆಯೇ ವಿದೇಶದಿಂದ ಬಂದ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಿದ್ದೇವೆ. ಇದರಲ್ಲಿ ಕೊರೊನಾ ಸೋಂಕು ಕೆಲವರಲ್ಲಿ ಕಂಡುಬಂದ ನಂತರ, ಅವರ ಎರಡನೇ ಮತ್ತು ಮೂರನೇ ಸಂಪರ್ಕಿತರನ್ನು ತ್ವರಿತಗತಿಯಲ್ಲಿ ಪತ್ತೆ ಹಚ್ಚಿ ಪರೀಕ್ಷೆಗೆ ಒಳಪಡಿಸಿರುವುದಲ್ಲದೆ, ಅವರೆಲ್ಲರನ್ನೂ ಕ್ವಾರಂಟೈನ್ ಮಾಡಿದ್ದೇವೆ.

ನಾಪತ್ತೆಯಾಗಿರುವವರು ತಮ್ಮ ಸಂಪರ್ಕಗಳನ್ನು ಕಡಿದುಕೊಂಡಿದ್ದಾರೆ, ಆದರೂ ಪೊಲೀಸರು ಅವರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಹೊಸ ವೈರಾಣು ಸೋಂಕು ಕಾಣಿಸಿಕೊಂಡವರ ಜೊತೆ ವಿಮಾನದಲ್ಲಿ ಬಂದ ಎಲ್ಲರನ್ನೂ ಪತ್ತೆ ಹಚ್ಚಿ ಅವರ ಆರೋಗ್ಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲಾಗುವುದು, ಅಷ್ಟೇ ಅಲ್ಲ, ಎರಡು ಮತ್ತು ಮೂರನೇ ಸಂಪರ್ಕಿತರನ್ನೂ ಪತ್ತೆ ಹಚ್ಚಿ ನಿಗಾ ಇಡಲಾಗುವುದು ಎಂದರು.

## ಬಿ.ಕಲಪನಹಳ್ಳಿಯಲ್ಲಿ ಇಂದು ಶರಣ ಬಸಪ್ಪಜ್ಜರ ಕಾರ್ತಿಕ



ದಾವಣಗೆರೆ ತಾಲ್ಲೂಕು ಬಿ.ಕಲಪನಹಳ್ಳಿಯ ಶ್ರೀ ಶರಣ ಬಸಪ್ಪಜ್ಜನವರ ಕಾರ್ತಿಕೋತ್ಸವವು ಇಂದು ರಾತ್ರಿ 7.30ಕ್ಕೆ ನಡೆಯಲಿದೆ. ಭಕ್ತಾದಿಗಳು ಭಾಗವಹಿಸಲು ವಿನಂತಿಸಿದೆ.

## ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ದತ್ತಾತ್ರೇಯ ಜಯಂತಿ





ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀಮತಿ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜಾ ಕಾರ್ಯಕ್ರಮಗಳು ನಡೆಯುತ್ತಿದ್ದು, ಬರುವ ಜನವರಿ 14ರವರೆಗೆ ಜರುಗಲಿವೆ. ಹೊಸ್ತಿಲು ಹುಣ್ಣಿಮೆ ದಿನವಾದ ಇಂದು ಶ್ರೀ ದತ್ತಾತ್ರೇಯ ಜಯಂತಿ ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿ ಶ್ರೀದಾ ಸ್ಯಾರೀಸ್ ಮಾನ್‌ಸೂನ್ ಪ್ರದರ್ಶನ



ಡಿಸೈನರ್ ರಾಮ್ ಇವರಿಂದ ಹೊಚ್ಚ ಹೊಸ ಡಿಸೈನ್‌ಗಳ ನವೀನ ಮಾದರಿಯ ಸ್ಯಾರಿಗಳ ಪ್ರದರ್ಶನವನ್ನು ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 11ರಿಂದ ರಾತ್ರಿ 8.30ರವರೆಗೆ ಮಾತ್ರ ಪ್ರದರ್ಶನಗೊಳ್ಳಲಿದೆ. ಸಾಂಪ್ರದಾಯಿಕ ಸೊಬಗಿನ ಜೊತೆಗೆ ಸಮಕಾಲೀನತೆಯ ಸೊಗಡಿನ ಸೀರೆಗಳು ವಾರ್ಡ್‌ರೋಬ್‌ಗೆ ಹೊಸ ತಿರುವನ್ನೇ ನೀಡಬಹುದು.

ಕಲಾಕ್ಷೇತ್ರ ಶೈಲಿಯಲ್ಲಿ ಪರಿಣಿತಿ ಪಡೆದ ಡಿಸೈನರ್ ರಾಮ್ ಪುರಾತನ ಝರಿಗಳೊಂದಿಗೆ ಡೇ ಟು ಡೇ ಬನಾರಸ್, ಲೆನಿನ್, ಮಟ್ಕಾ, ಬನಾರಸ್, ಖಾದಿ, ಖೋರಾ, ಡಿಜಿಟಲ್ ಟಷರ್ ಸಿಲ್ಕ್, ಡಿಜಿಟಲ್ ಪ್ರಿಂಟ್, ಫ್ಯಾನ್ಸಿ ಸೀರೆಗಳ ಹೊಸ ಶ್ರೇಣಿಯನ್ನು ತಂದಿರುತ್ತಾರೆ.

## ಅವಘಡ: ಜಿಪಂ ಅಧ್ಯಕ್ಷರಿಂದ ಸಾಂತ್ವನ



ಜಗಳೂರು, ಡಿ.29- ತಾಲ್ಲೂಕಿನ ಹನುಮಂತಾಪುರ ಗೊಲ್ಲರಹಟ್ಟಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶಗೊಂಡು ಮಹಿಳೆ ಮೃತಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯ್ತಿ ನೂತನ ಅಧ್ಯಕ್ಷರಾದ ಶಾಂತಕುಮಾರಿ ಶಶಿಧರ್ ಭೇಟಿ ನೀಡಿ, ಮೃತಳ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಸರ್ಕಾರದಿಂದ ದೊರಕುವ ಪರಿಹಾರವನ್ನು ಶೀಘ್ರವೇ ಬರುವಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು, ಗ್ರಾಮದ ಮುಖಂಡರಾದ ಎ. ರಂಗಪ್ಪ, ಶಿವು, ನಾಗವೇಣಿ, ಹಳ್ಳೆಪ್ಪ ಇನ್ನಿತರರಿದ್ದರು.

## ಉಪಸಭಾಪತಿ ಆತ್ಮಹತ್ಯೆ

**(1ನೇ ಪುಟದಿಂದ)** ರೈಲು ಯಾವ ಸಮಯಕ್ಕೆ ಬರುತ್ತದೆ ಎಂಬ ಮಾಹಿತಿ ಪಡೆದು ನಂತರ ತಮ್ಮ ಕಾರಿನಲ್ಲಿ ಏಕಾಂಗಿಯಾಗಿ ತೆರಳಿ, ಆತ್ಮಹತ್ಯೆಗೆ ಶರಣಾಗಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಈಚೆಗೆ ನಡೆದ ಸಭಾಪತಿ ಆಯ್ಕೆ ವಿಚಾರದಲ್ಲಿ ನಡೆದ ಘಟನೆಯಿಂದ ಅವರು ಮನನೊಂದಿದ್ದರು. ಈ ವಿಷಯವನ್ನು ತಮ್ಮ ಸಹೋದರ ಹಾಗೂ ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡರೊಂದಿಗೆ ಬೇಸರ ಹಂಚಿಕೊಂಡಿದ್ದರು ಎನ್ನಲಾಗಿದೆ.

ಅವರ ಆರೋಗ್ಯದಲ್ಲೂ ಇತ್ತೀಚೆಗೆ ಏರುಪೇರು ಕಂಡುಬಂದಿತ್ತು ಮತ್ತು ಕೊರೊನಾ ಸೋಂಕು ಅವರಲ್ಲಿ ದೃಢಪಟ್ಟು, ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ವಿಧಾನ ಪರಿಷತ್ ಕಾರ್ಯಕಲಾಪ ಮುಗಿಸಿಕೊಂಡು ತಮ್ಮ ಊರಿಗೆ ತೆರಳಿದ್ದ ಧರ್ಮೇಗೌಡ ಮತ್ತೆ ರಾಜಧಾನಿಗೆ ಬಂದಿರಲಿಲ್ಲ.

ಆತ್ಮಹತ್ಯೆ ಮೊಕದ್ದಮೆ ದಾಖಲು ಮಾಡಿಕೊಂಡಿರುವ ಸ್ಥಳೀಯ ಪೊಲೀಸರು ಸಾವಿಗೆ ಕಾರಣಗಳನ್ನು ಪತ್ತೆ ಮಾಡುತ್ತಿದ್ದಾರೆ. ಇತ್ತೀಚೆಗೆ ಸಭಾಪತಿ ಆಯ್ಕೆ ಸಂದರ್ಭದಲ್ಲಿ ತಮಗೆ ಇಷ್ಟ ಇಲ್ಲದಿದ್ದರೂ, ಕೆಲವರು ಪೀಠಕ್ಕೆ ಕುಳ್ಳಿರಿಸಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಅವರನ್ನು ಹಿಡಿದು ಎಳೆದಾಡಿದ್ದಲ್ಲದೆ, ಪೀಠದಿಂದ ಕೆಳಕ್ಕೆ ನೂಕಿದ್ದರು.

ಈ ಸಂದರ್ಭದಲ್ಲಿ ಹಿರಿಯ ಸದಸ್ಯರೊಬ್ಬರು ಅವರ ಸಹಾಯಕ್ಕೆ ಬರದಿದ್ದರೆ ದೊಡ್ಡ ಅನಾಹುತವೇ ಘಟಿಸುತ್ತಿತ್ತು.

ಈ ಘಟನೆಯಿಂದ ಅವರು ಚೇತರಿಸಿಕೊಳ್ಳಲು ಅಲ್ಲೇ ಸಾಕಷ್ಟು ಸಮಯ ಹಿಡಿದಿತ್ತು. ಈ ನಡುವೆ ಸಭಾಪತಿ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟು ಕೊಡುವ ಬಗ್ಗೆಯೂ ಬಿಜೆಪಿಯಲ್ಲಿ ಆಂತರಿಕ ಚರ್ಚೆ ನಡೆದಿತ್ತು.

ಜೆಡಿಎಸ್‌ಗೆ ಈ ಸ್ಥಾನ ದೊರೆತರೆ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಅವರನ್ನು ಸಭಾಪತಿಯಾಗಿ ನೇಮಕ ಮಾಡೋಣ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು, ಪಕ್ಷದ ನಾಯಕ ಹಾಗೂ ತಮ್ಮ ಪುತ್ರ ಎಚ್.ಡಿ. ಕುಮಾರಸ್ವಾಮಿ ಬಳಿ ಹೇಳಿದ್ದರಂತೆ. ಆದರೆ ಕುಮಾರಸ್ವಾಮಿ, ಸರ್ಕಾರದ ಬಳಿಯೇ ಈ ಸ್ಥಾನ ಇರಲಿ ನಾವು ಧರ್ಮೇಗೌಡರನ್ನು ಬದಲಾವಣೆ ಮಾಡುವುದು ಬೇಡ, ಅವರೇ ಮುಂದುವರೆಯಲಿ ಎಂದಿದ್ದರಂತೆ. ಸದನ ಕಲಾಪದ ಘಟನೆ ಸೇರಿದಂತೆ ಧರ್ಮೇಗೌಡರ ಆತ್ಮಹತ್ಯೆಗೆ ಕಾರಣ ಏನೆಂಬುದನ್ನು ವಿವಿಧ ಆಯಾಮಗಳಲ್ಲಿ ಪತ್ತೆ ಹಚ್ಚುವ ಕಾರ್ಯದಲ್ಲಿ ಪೊಲೀಸರು ತೊಡಗಿದ್ದಾರೆ.

## ಧರ್ಮೇಗೌಡ ನಿಧನಕ್ಕೆ ಹೆಚ್ಚೆಸ್ ಶಿವಶಂಕರ್ ಸಂತಾಪ

ದಾವಣಗೆರೆ, ಡಿ.29- ವಿಧಾನ ಪರಿಷತ್ತಿನ ಉಪ ಸಭಾಪತಿ ಎಸ್.ಎಲ್.ಧರ್ಮೇಗೌಡ ಅವರ ಅಕಾಲಿಕ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿರುವ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ಧರ್ಮೇಗೌಡ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು. ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಕಾರ್ಯಾಧ್ಯಕ್ಷ ಗಣೇಶ್ ದಾಸಕರಿಯಪ್ಪ, ಜಿಲ್ಲಾ ಜೆಡಿಎಸ್ ವಿದ್ಯಾರ್ಥಿ ಘಟಕದ ಅಧ್ಯಕ್ಷ ಧನಂಜಯ ಕುಮಾರ್ ಅವರುಗಳು ಧರ್ಮೇಗೌಡ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

### ಕವಿಚರಣಕೆ ನುಡಿ ನಮನ

ಪ್ರಕೃತಿಯ ಸೊಬಗಲ್ಲಿ ಮಲೆನಾಡ ಮಡಿಲಲ್ಲಿ
ಜನಿಸಿದರಿವರು ನಮ್ಮ ಕುವೆಂಪು
ಸೂಸಿಹರು ಎಲ್ಲೆಡೆ ಕನ್ನಡದ ಕಂಪು
ಓದುಗನೆದೆಯಲಿ ಹರಡುತಲಿ ತಂಪು

ಜಗದ ಕವಿ ಯುಗದ ಕವಿ ಎಂದು ಬೇಂದ್ರೆ ಕರೆದರು
ಮನುಜ ಮತ ವಿಶ್ವ ಪಥ ಎಂದಿವರು ಸಾರಿದರು
ಅಜ್ಞಾನದ ಅಂಧಕಾರಕೆ ಜ್ಞಾನದ ಕಿಡಿ ಹೊತ್ತಿಸಿದವರು
ಅಸಮಾನತೆಯ ಕಡಲೊಳಗೆ ಸಮಾನತೆಯ ಅಲೆ ಎಬ್ಬಿಸಿದವರು

ಸರಳ ಸೌಮ್ಯ ಜೀವನದ ರೂವಾರಿಯಾದಿರಿ
ಸಾಹಿತ್ಯ ಲೋಕದ ಹೆಮ್ಮೆಯ ಸಿರಿಯಾದಿರಿ
20ನೇ ಶತಮಾನ ಕಂಡ ದೈತ್ಯ ಪ್ರತಿಭೆ
ಇವರ ಪ್ರತಿಯೊಂದು ಬರಹವು ಸಾಹಿತ್ಯಕೆ ಶೋಭೆ

ಜಾತಿ -ಮತ -ಪಂಥಗಳನು
ದಿಗಂತದಾಚೆ ತೂರಿದವರು
ಎರಡನೇ ರಾಷ್ಟ್ರಕವಿ ಕನ್ನಡಕ್ಕಿವರು
ಅಮೃತದ ಸವಿಯನ್ನು ಜಗಕೆಲ್ಲ ಬಡಿಸಿಹರು

ಸಲ್ಲಿಸೋಣ ಭಾವಪೂರ್ಣ ನುಡಿ ನಮನ
ಹೆಮ್ಮೆಯಿಂದ ಆಚರಿಸುತ ವಿಶ್ವ ಮಾನವ ದಿನ
ಹೊಸ ಚಿಗುರಿಗೆ ಹಳೆಬೇರಿನ ನೀರೆರೆವ ದಿನ
ಗುರುಕೃಪೆಯಿಂದ ಹಸನಾಗಲಿ ನಮ್ಮೆಲ್ಲರ ಜೀವನ

- ಶ್ರೀಮತಿ ಸುನಿತಾ ಪ್ರಕಾಶ್

## ದೀಕ್ಷಿತ್ ರಸ್ತೆಯ ವರಸಿದ್ಧಿ ಏಕದಂತ ವಿನಾಯಕ ದೇವಸ್ಥಾನದಲ್ಲಿ ಕಾರ್ತಿಕ

ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ವರಸಿದ್ಧಿ ಏಕದಂತ ವಿನಾಯಕ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿಮೆ ಪ್ರಯುಕ್ತ ಇಂದು ಸಂಜೆ 7.30 ಕ್ಕೆ ಕಡೇ ಕಾರ್ತಿಕೋತ್ಸವ ನಡೆಯಲಿದೆ.

## ನಗರದ ಪಿ.ಜೆ. ಬಡಾವಣೆ ರಾಯರ ಮಠದಲ್ಲಿ ಕಾರ್ತಿಕ

ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಇಂದು ಸಂಜೆ ಸಂಜೆ 7.30 ಕ್ಕೆ ಕಾರ್ತಿಕ ದೀಪೋತ್ಸವ ನಡೆಯಲಿದೆ.

# ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆಗೆ ಹಕ್ಕೊತ್ತಾಯ



ದಾವಣಗೆರೆ, ಡಿ.29- ಕನ್ನಡ ಕಾಯಕ ವರ್ಷಾಚರಣೆ ಅಡಿಯಲ್ಲಿ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಹಾಗೂ ನಗರ ಪಾಲಿಕೆಯ ಕನ್ನಡ ಜಾಗೃತಿ ಸಮಿತಿ ವತಿಯಿಂದ ನಗರದಲ್ಲಿ ಇಂದು ಬ್ಯಾಂಕುಗಳಲ್ಲಿ ಕನ್ನಡ ಬಳಕೆಯ ಕುರಿತು ಜಾಗೃತಿ ಅಭಿಯಾನ ನಡೆಸಲಾಯಿತು.

ಕುವೆಂಪು ಕನ್ನಡ ಭವನದಿಂದ ಎರಡೂ ಸಮಿತಿಯ ಸದಸ್ಯರು ಹಾಗೂ ಕನ್ನಡಾಭಿಮಾನಿಗಳು ಘೋಷ ವಾಕ್ಯದ ಫಲಕಗಳನ್ನು ಕೈಯಲ್ಲಿ ಹಿಡಿದು ಮೌನ ಮೆರವಣಿಗೆ ಮೂಲಕ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಕಚೇರಿಗೆ ತೆರಳಿ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಆದ ಕೆನರಾ ಬ್ಯಾಂಕ್‌ನ ವಿಭಾಗೀಯ ಪ್ರಬಂಧಕ ಸುಶ್ರುತ್ ಶಾಸ್ತ್ರಿ ಅವರಿಗೆ ಬ್ಯಾಂಕ್‌ನಲ್ಲಿ ಕನ್ನಡ ಬಳಕೆಯ ಹಕ್ಕೊತ್ತಾಯದ ಮನವಿ ಸಲ್ಲಿಸಿದರು. ಜಿಲ್ಲೆಯ 32 ಬ್ಯಾಂಕುಗಳ ಮುಖ್ಯಸ್ಥರಿಗೂ ಬ್ಯಾಂಕುಗಳಲ್ಲಿ ಕನ್ನಡ ಬಳಕೆ ಕುರಿತಂತೆ ಜಾಗೃತಿ ಮೂಡಿಸಿದರು.

ನಂತರ ಜಿಲ್ಲಾಡಳಿತ ಭವನದಲ್ಲಿ ನಡೆಯುತ್ತಿದ್ದ ಮಾರ್ಗದರ್ಶಿ ಬ್ಯಾಂಕ್‌ನ ಜಿಲ್ಲಾ ಮಟ್ಟದ ಪುನರಾವಲೋಕನ ಸಮಿತಿ ಸಭೆಗೆ ತೆರಳಿ, ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಸಿಇಒ ಪದ್ಮ ಬಸವಂತಪ್ಪ ಅವರಿಗೆ ಹಕ್ಕೊತ್ತಾಯವನ್ನು ಸಲ್ಲಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಮಂಜುನಾಥ್ ಕುರ್ಕಿ ಮಾತನಾಡಿ, ಬ್ಯಾಂಕುಗಳಲ್ಲಿ ಎಲ್ಲಾ ವ್ಯವಹಾರಗಳು, ಸುತ್ತೋಲೆಗಳು ಹಾಗೂ ಮಾಹಿತಿಗಳು ಕನ್ನಡದಲ್ಲಿಯೇ ಇದ್ದರೆ ಗ್ರಾಹಕರಿಗೆ ಅನುಕೂಲ. ತ್ರಿಭಾಷಾ ಸೂತ್ರ ಅನುಸರಿಸುವಾಗ ಕನ್ನಡಕ್ಕೆ ಪ್ರಾಧಾನ್ಯತೆ ಇರಬೇಕು. ಬ್ಯಾಂಕಿನ ಜಾಲತಾಣಗಳು, ಎಟಿಎಂ ವ್ಯವಹಾರಗಳು, ಸೂಚನಾ ಫಲಕಗಳೂ ಸೇರಿದಂತೆ ಪ್ರದರ್ಶನ ಪತ್ರಗಳು ಕನ್ನಡದಲ್ಲಿಯೇ ಇರಬೇಕು. ಗ್ರಾಹಕರು ಚೆಕ್, ಚಲನ್ ಮೊದಲಾದವುಗಳನ್ನು ಕನ್ನಡದಲ್ಲಿಯೇ ಭರ್ತಿ ಮಾಡಬಹುದು. ಇದನ್ನು ಬ್ಯಾಂಕುಗಳೂ ಕೂಡ ಪ್ರೋತ್ಸಾಹಿಸಬೇಕು ಎಂದು ಹಕ್ಕೊತ್ತಾಯ ಮಂಡಿಸಿದರು.

ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಎನ್.ಟಿ. ಎರ್ರಿಸ್ವಾಮಿ ಮಾತನಾಡಿ, ನಿತ್ಯ ವ್ಯವಹಾರದ ಅಗತ್ಯ ಪದಗಳ ಕೈಪಿಡಿಯನ್ನು ಸಿದ್ಧಪಡಿಸಿ ಅದನ್ನು ಗ್ರಾಹಕರಿಗೆ ದೊರಕುವಂತೆ ಮಾಡಬೇಕು. ಗ್ರಾಹಕರ ಅನುಕೂಲಕ್ಕಾಗಿ ಕನ್ನಡ ಬಲ್ಲವರನ್ನು ಕನ್ನಡ ಸಂಪರ್ಕಾಧಿಕಾರಿಯಾಗಿ ನೇಮಿಸಿ ಪರಿಣಾಮಕಾರಿಯಾಗಿ ಕನ್ನಡವನ್ನು ಅನುಷ್ಠಾನಗೊಳಿಸಬಹುದು. ಬ್ಯಾಂಕ್ ಸಿಬ್ಬಂದಿಗಳಿಗಾಗಿ ವಾರಕ್ಕೆ ಒಮ್ಮೆಯಾದರೂ ಕನ್ನಡ ಸ್ಪರ್ಧೆಗಳನ್ನು ಏರ್ಪಡಿಸುವಂತೆ ಮನವಿ ಮಾಡಲಾಯಿತು.

ಜಿಲ್ಲಾ ಪಂಚಾಯತ್ ಸಿಇಓ ಪದ್ಮ ಬಸವಂತಪ್ಪ ಮಾತನಾಡಿ, ಬ್ಯಾಂಕುಗಳಲ್ಲಿ ಕನ್ನಡವನ್ನು ಬಳಕೆಗೆ ತರುವುದು ಬಹುಮುಖ್ಯವಾಗಿದೆ ಎಂದರಲ್ಲದೆ, ಎಟಿಎಂಗಳಲ್ಲಿ ಕನ್ನಡ ಮಾಯವಾಗಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದ್ದು, ಶೀಘ್ರವೇ ಈ ಸಂಬಂಧ ಬ್ಯಾಂಕುಗಳಲ್ಲಿ ಕ್ರಮ ಕೈಗೊಂಡು ಕನ್ನಡ ಬಳಕೆಗೆ ಪ್ರಾಶಸ್ತ್ಯ ನೀಡಬೇಕಿದೆ ಎಂದರು.

ಅಭಿಯಾನದಲ್ಲಿ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾದ ಎಸ್.ಎಸ್. ಸಿದ್ಧರಾಜು, ದೇವಿಕ ಸುನಿಲ್, ಹೆಚ್.ಕೆ. ಸತ್ಯಭಾಮ, ನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ಸದಸ್ಯರಾದ ಬಾ.ಮ. ಬಸವರಾಜಯ್ಯ, ಬಂಕಾಪುರದ ಚೆನ್ನಬಸಪ್ಪ, ಎ. ಮಹಲಿಂಗಪ್ಪ, ಬಿ. ದಿಳ್ಳೆಪ್ಪ, ಸಹನಾ ರವಿ, ಪುಷ್ಪಾವತಿ, ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಕಚೇರಿ ಕಾರ್ಯದರ್ಶಿ ಜಿ.ಆರ್. ಷಣ್ಮುಖಪ್ಪ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ. ಆರ್. ಆರಾಧ್ಯ, ಕನ್ನಡ ಪರ ಸಂಘಟನೆಯ ಕೆ.ಜಿ. ಯಲ್ಲಪ್ಪ, ಇಸ್ಮಾಯಿಲ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

## ಹರಪನಹಳ್ಳಿ: ಮತ ಎಣಿಕೆಗೆ ಸಿಸಿ ಕ್ಯಾಮರಾ ಕಣ್ಗಾವಲು

ಹರಪನಹಳ್ಳಿ, ಡಿ.29- ಪಟ್ಟಣದ ತರಳಬಾಳು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಡಿ.30 ರಂದು ತಾಲ್ಲೂಕಿನ 35 ಗ್ರಾಮ ಪಂಚಾಯ್ತಿಗಳ ಚುನಾವಣೆಯ ಮತ ಎಣಿಕೆ ಸಿಸಿ ಕ್ಯಾಮರದ ಕಣ್ಗಾವಲಿನಲ್ಲಿ ನಡೆಸಲು ತಾ. ಆಡಳಿತ ಸಿದ್ದತೆ ಮಾಡಿಕೊಂಡಿದೆ. ಈ ಕುರಿತು ಮಾಹಿತಿ ನೀಡಿದ ತಹಶೀಲ್ದಾರ್ ಎಲ್. ಎಂ. ನಂದೀಶ್, ಮತ ಎಣಿಕೆಗೆ 18 ಕೊಠಡಿಗಳು, 71 ಟೇಬಲ್‌ಗಳು, ಒಂದು ಕೊಠಡಿಯಲ್ಲಿ ನಾಲ್ಕು ಟೇಬಲ್ ಗಳನ್ನು ಎಣಿಕೆಗೆ ಸಿದ್ದತೆ ಮಾಡಲಾಗಿದೆ.

243 ಸಿಬ್ಬಂದಿ ಮತ ಎಣಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. 559 ಸ್ಥಾನಗಳಿಗೆ 1369 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 49 ಅಭ್ಯರ್ಥಿಗಳು ಈಗಾಗಲೇ ಅವಿರೋಧ ಆಯ್ಕೆಯಾಗಿದ್ದಾರೆ.

35 ಗ್ರಾಮ ಪಂಚಾಯ್ತಿಗಳ ಮತ ಎಣಿಕೆ ಕಾರ್ಯ ಏಕ ಕಾಲಕ್ಕೆ ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ರಾತ್ರಿ 8 ಗಂಟೆ ಹೊತ್ತಿಗೆ ಸಂಪೂರ್ಣ ಫಲಿತಾಂಶ ಹೊರ ಬರುವ ವಿಶ್ವಾಸವನ್ನು ತಹಶೀಲ್ದಾರ್ ವ್ಯಕ್ತಪಡಿಸಿದ್ದಾರೆ.

## ತಾವರಗುಂದಿಯಲ್ಲಿ ಇಂದು ಶಿವದೀಕ್ಷಾ

ಹರಪನಹಳ್ಳಿ ತಾಲ್ಲೂಕಿನ ತಾವರಗುಂದಿ ಗ್ರಾಮದ ದುಗ್ಗತ್ತಿ ಮಠದಲ್ಲಿ ಇಂದು ಶಿವದೀಕ್ಷಾ ನಡೆಯಲಿದೆ. ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಸಾನ್ನಿಧ್ಯ ವಹಿಸಲಿದ್ದು, ನೆಗಳೂರು ಹಿರೇಮಠದ ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಶಿವದೀಕ್ಷಾ ಸಂಸ್ಕಾರ ನೀಡುವರು.


### ಬೇಕಾಗಿದ್ದಾರೆ

ದಕ್ಷಬ್ರಹ್ಮ ಕುರಿ ಮತ್ತು ಉಣ್ಣೆ ರೈತ ಉತ್ಪಾದಕ ಕಂಪನಿ,ತಾವರೆಕೇರೆ, ತಾ|| ಚನ್ನಗಿರಿ, ದಾವಣಗೆರೆ ಜಿಲ್ಲೆ ಇಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ (CEO) ಹುದ್ದೆ ಮತ್ತು ದತ್ತಾಂಶ ಸಹಾಯಕ (DEO) ಹುದ್ದೆಗಳಿಗೆ ಅರ್ಜಿ ಆಹ್ವಾನ ಕಾರ್ಯನಿರ್ವಹಿಸಲು

| ಕ್ರ.ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆ | ಅನುಭವ |
|---|---|---|---|
| 1 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿ (CEO) 1 ಹುದ್ದೆ | MBA/ BSc agri | ಉತ್ಪಾಧನೆ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ಅನುಭವ |
| 2 | ದತ್ತಾಂಶ ಸಹಾಯಕ (DEO) 1 ಹುದ್ದೆ | ಯಾವುದೇ ಪದವಿ | ಕಂಪ್ಯೂಟರ್ ಜ್ಞಾನದ ಅನುಭವ |

ದಿನಾಂಕ 09.01.2021 ರ ಒಳಗಾಗಿ ಖುದ್ದು ಅಥವಾ ಈ ಕೆಳಕಾಣಿಸಿದ ದೂರವಾಣಿಗಳಿಗೆ ಸಂಪರ್ಕಿಸಬೇಕಾಗಿ ವಿನಂತಿ.

ದೂ.ಸಂ:- 90085 24914, 70193 94129, 93800 03891



ನೂತನ ಪ್ರಾರಂಭ

ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣ ಸಂಘ (ರಿ.)
Global Helpline Nirudyoga Nivarana Sangha (R.)

#1948/21, 13ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ-577 005.
E.mail : globalhelplinejbj@gmail.com.

ಉದ್ಯೋಗ ಮಾಹಿತಿ ಕೇಂದ್ರ

ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ. S.S.L.C., P.U.C., B.A., B.Com., B.Sc., B.B.M., MA, M.Sc, M.Com, MBA, MCA ಆದ ಅಭ್ಯರ್ಥಿಗಳು ನಮ್ಮ ಸಂಘಕ್ಕೆ ಬಂದು ಹೆಸರು, ವಿಳಾಸಗಳನ್ನು ನೋಂದಾಯಿಸಿಕೊಳ್ಳಿ ಹಾಗೂ ಅಂಗವೈಕಲ್ಯವಿರುವವರಿಗೂ ಅವಕಾಶವಿದೆ. "ಕೆಲಸಕ್ಕೆ ಹೋಗಲು ಸಿದ್ಧರಾಗಿ".

ಕರೆ ಮಾಡುವ ಸಮಯ : ಬೆಳಿಗ್ಗೆ 10.00 ರಿಂದ ಸಂಜೆ 05.00ರವರೆಗೆ

ಸಂಪರ್ಕಿಸಿ : 81470 12999, 89512 72999

# ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ ಕಾರ್ಯಕ್ರಮದಡಿ ಕಾಮಗಾರಿಗಳಿಗೆ ಶಂಕುಸ್ಥಾಪನೆ



## ಮಹಾಪೌರ ಬಿ.ಜಿ. ಅಜಯ್‌ಕುಮಾರ್

ದಾವಣಗೆರೆ, ಡಿ.29- ಸಾರ್ವಜನಿಕರ ಸಮಸ್ಯೆಗಳಿಗೆ ತತ್ ಕ್ಷಣವೇ ಸ್ಪಂದಿಸುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆಯಿಂದ 'ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ' ಕಾರ್ಯಕ್ರಮ ನಡೆಯುತ್ತಿದ್ದು, ಈ ವಿಶೇಷ ಕಾರ್ಯಕ್ರಮವು 15, 16ನೇ ವಾರ್ಡುಗಳ ದೇವರಾಜ ಅರಸು ಬಡಾವಣೆ ಮತ್ತು ವಿನೋಬನಗರದಲ್ಲಿ ಯಶಸ್ವಿಯಾಗಿ ನಡೆಯಿತು.

ಆಸ್ತಿ ತೆರಿಗೆ ಮತ್ತು ನೀರಿನ ದರದಿಂದ 7,47,203 ರೂ. ಸಂಗ್ರಹವಾಗಿದ್ದು, 6 ಉದ್ದಿಮೆಗಳಿಗೆ ಸ್ಥಳದಲ್ಲಿಯೇ ಪರವಾನಿಗೆ ವಿತರಿಸಿದ್ದು, ಇದರಿಂದ 5,400 ರೂ. ಸೇರಿ ಹಣ ಒಟ್ಟು 7,52,603 ರೂ. ಸಂಗ್ರಹವಾಗಿದೆ ಎಂದು ಮಹಾಪೌರರಾದ ಬಿ.ಜಿ.ಅಜಯ್‌ಕುಮಾರ್ ತಿಳಿಸಿದ್ದಾರೆ.

ಈ ವೇಳೆ 15ನೇ ವಾರ್ಡ್‌ನಲ್ಲಿ 25 ಲಕ್ಷ ರೂ. ಮೊತ್ತದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಮತ್ತು 16ನೇ ವಾರ್ಡ್ ವಿನೋಬನಗರದಲ್ಲಿ 20 ಲಕ್ಷ ರೂ. ಮೊತ್ತದಲ್ಲಿ ಡಾಂಬರ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು ಎಂದವರು ಹೇಳಿದರು.

ಜನನ/ಮರಣ ಪ್ರಮಾಣ ಪತ್ರ, ಕಟ್ಟಡ ಪರವಾನಿಗೆ, ಬೀದಿ ದೀಪ, ಇಂಜಿನಿಯರ್ ಶಾಖೆ ಮತ್ತು ಇತರೆ ದೂರುಗಳಿಗೆ ಸಂಬಂಧಿಸಿದಂತೆ ಹಲವು ಅರ್ಜಿಗಳು ಬಂದಿದ್ದು, ಸೂಕ್ತ ದಾಖಲಾತಿಗಳನ್ನು ಪಡೆದು ಸ್ಥಳದಲ್ಲಿಯೇ ಕೆಲಸ ಮಾಡಿಕೊಡಲಾಗುತ್ತಿದೆ. ವಾರದಲ್ಲಿ ಮೂರು ದಿನ ನಿಗದಿ ಪಡಿಸಿದ ವಾರ್ಡ್‌ಗಳಿಗೆ ಭೇಟಿ ನೀಡುತ್ತಿದ್ದು, ಆಯ ವಾರ್ಡ್‌ನ ಸ್ಥಳೀಯರಿಂದ ಉತ್ತಮ ಬೆಂಬಲ ಮತ್ತು ಪ್ರತಿಕ್ರಿಯೆ ಪಡೆಯುತ್ತಿದ್ದೇವೆ. ಈ ವಿನೂತನ ಕಾರ್ಯಕ್ರಮಕ್ಕೆ ಸಾರ್ವಜನಿಕರು ಆಗಮಿಸಿ, ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಅಜಯ್‌ಕುಮಾರ್ ವಿನಂತಿಸಿದ್ದಾರೆ.

ಈ ಸಂದರ್ಭದಲ್ಲಿ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ.ವೀರೇಶ್, ವಿರೋಧ ಪಕ್ಷದ ನಾಯಕರೂ ಆದ 16ನೇ ವಾರ್ಡ್‌ನ ಸದಸ್ಯ ಎ.ನಾಗರಾಜ್, 15ನೇ ವಾರ್ಡ್‌ನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಸೇರಿದಂತೆ ಸಾರ್ವಜನಿಕರು ಹಾಗೂ ಇತರರಿದ್ದರು.

# ಹರಿಹರದಲ್ಲಿ ವಿವಾಹಿತ ಮಹಿಳೆಯ ಕೊಲೆ



ಹರಿಹರ, ಡಿ.29- ನಗರದ ಮಾಜೇ ನಹಳ್ಳಿ ಗ್ರಾಮ ದೇವತೆ ದೇವಸ್ಥಾನದ ಮುಂಭಾಗದಲ್ಲಿ ಭರಮಂಪುರ ನಿವಾಸಿ ರೇಖಾ ನಾಗರಾಜ್ (28) ಎಂಬ ವಿವಾಹಿತ ಮಹಿಳೆಯನ್ನು ಚೇತನ್ ತಂದೆ ಬೀರಪ್ಪ ಎಂಬಾತ ಇಂದು ರಾತ್ರಿ 8 ಗಂಟೆಯ ಸುಮಾರಿಗೆ ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ ಮಾತನಾಡಿ, ಇಂದು ಸಂತೆ ದಿನವಾಗಿದ್ದರಿಂದ ರೇಖಾ ತರಕಾರಿ ಮಾರಿಕೊಂಡು ಮನೆಗೆ ತನ್ನ ಮಗನೊಂದಿಗೆ ತೆರಳುತ್ತಿದ್ದಾಗ ದೇವಸ್ಥಾನದ ಮುಂಭಾಗದಲ್ಲಿ ಈ ಕೃತ್ಯ ನಡೆದಿದೆ ಎಂದು ಹೇಳಿದರು.

ರೇಖಾಳನ್ನು ತಡೆದು ನಿಲ್ಲಿಸಿದ 22 ವರ್ಷ ವಯಸ್ಸಿನ ಚೇತನ್, ಆಕೆಯ ಕುತ್ತಿಗೆ, ಕಣ್ಣು, ಕಾಲು ಮತ್ತು ಹೃದಯ ಭಾಗಕ್ಕೆ ಚಾಕುವಿನಿಂದ ತಿವಿದು ಕೊಲೆ ಮಾಡಿದ್ದಾನೆ. ಸ್ಥಳೀಯ ಸಾರ್ವಜನಿಕರು ಕೃತ್ಯವನ್ನು ನೋಡಿ ಪೊಲೀಸರ ಗಮನಕ್ಕೆ ತಂದಿದ್ದಾರೆ. ರೇಖಾ ಮತ್ತು ಚೇತನ್ ಇಬ್ಬರಿಗೂ ಹಲವಾರು ದಿನಗಳಿಂದ ಸ್ನೇಹ ಇದ್ದು, ಕಳೆದ ಆರು ತಿಂಗಳ ಹಿಂದೆ ಒಮ್ಮೆ ಗಲಾಟೆ ಕೂಡ ನಡೆದಿದೆ. ಮೃತಳ ಪತಿ ನಾಗರಾಜ್ ಹೊರಗಡೆ ಹೋಗುವಾಗ ಚೇತನ್ ನನ್ನು ವಾಹನ ಓಡಿಸಲು ಕರೆದುಕೊಂಡು ಹೋಗುತ್ತಿದ್ದ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಎಸ್ಪಿ ತಿಳಿಸಿದ್ದಾರೆ.

ರೇಖಾಗೆ ಇಬ್ಬರು ಮಕ್ಕಳಿದ್ದು, ದೊಡ್ಡಬೀದಿಯ ಮದ್ದಮ್ಮ ದೇವಸ್ಥಾನದ ಬಳಿ ವಾಸವಾಗಿದ್ದರು. ಪತಿ ನಾಗರಾಜ್ ತರಗಾರ ಕೆಲಸ ಮಾಡುತ್ತಾರೆ ಎನ್ನಲಾಗಿದೆ. ಚೇತನ್‌ನನ್ನು ವಶಕ್ಕೆ ತೆಗೆದುಕೊಂಡು ಪ್ರಕರಣವನ್ನು ಹರಿಹರ ನಗರ ಠಾಣೆಯಲ್ಲಿ ದಾಖಲಿಸಲಾಗಿದೆ.

ಡಿವೈಎಸ್ಪಿ ನರಸಿಂಹ ತಾಮ್ರಧ್ವಜ್, ಸಿಪಿಐ ಎಸ್. ಶಿವಪ್ರಸಾದ್, ಪಿಎಸ್‌ಐ ಸುನಿಲ್ ಬಸವರಾಜ್ ತೆಲಿ, ಡಿ ರವಿಕುಮಾರ್ ಹಾಗೂ ಮತ್ತಿತರರು ಸ್ಥಳಕ್ಕೆ ಭೇಟಿ ನೀಡಿದ್ದರು.

# ಎನ್.ಟಿ.ಪಿ. ಶ್ರೀನಿತ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಇಂದ್ರಪ್ಪ




ದಾವಣಗೆರೆ, ಡಿ.29- ಎನ್.ಟಿ.ಪಿ. ಶ್ರೀನಿತ್ಯ ಸೌಹಾರ್ದ ಕೋ-ಆಪರೇಟಿವ್ ಅಧ್ಯಕ್ಷರಾಗಿ ಹೆಚ್. ಇಂದ್ರಪ್ಪ, ಉಪಾಧ್ಯಕ್ಷರಾಗಿ ಎ. ಪರಮೇಶ್ವರಪ್ಪ ಅವರು ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ. ಡಾ. ಜೆ.ರಘುಕುಮಾರ್, ಹೆಚ್. ಮಹಾದೇವ, ಎಂ. ಪ್ರಕಾಶ್, ಅಮೃತ್ ಕೆ. ಪಟೇಲ್, ಬಿ.ವಿ. ಸುನಿಲ್, ಡಿ.ಎಂ. ವೆಂಕಟೇಶ್, ಮೃತ್ಯುಂಜಯಪ್ಪ, ಡಿ. ಸೋಮಶೇಖರ್, ಶ್ರೀಮತಿ ಅನುಷಾ ಪೃಥ್ವಿರಾಜ್, ಆರ್.ಎಂ. ಪ್ರೇಮ ಅವರುಗಳು ನಿರ್ದೇಶಕರುಗಳಾಗಿ ಆಯ್ಕೆಯಾಗಿದ್ದಾರೆ ಎಂದು ಸಿಇಓ ವೃಷಭೇಂದ್ರ ಸ್ವಾಮಿ ತಿಳಿಸಿದ್ದಾರೆ.

## 2 ರಂದು ರಾಮ ಮಂದಿರದಲ್ಲಿ ಕಾರ್ತಿಕ

ದಾವಣಗೆರೆ, ಡಿ.29- ನಗರದ ಪಿ.ಜೆ. ಬಡಾವಣೆ ಶ್ರೀ ರಾಮ ದೇವಸ್ಥಾನದ ಜನವರಿ 2 ರಂದು ಸಂಜೆ 7.30 ಕ್ಕೆ ಕಾರ್ತಿಕ ಏರ್ಪಡಿಸಲಾಗಿದೆ.


WANTED
FULL TIME ACCOUNT ASSISTANT
with Experience in Tally Accounting
Apply with Bio-Data immediately:
SHANTALA
Chamrajpet, Davanagere.
96861 95328, 96861 95323

# ಪಟ್ಟೆ ಹೆಬ್ಬಾತುಗಳ ಪುನರಾಗಮನ



ಮಂಗೋಲಿಯ ಮತ್ತು ಉತ್ತರ ಚೀನಾದಲ್ಲಿ ವಾಸಿಸುವ ಪಟ್ಟೆ ಹೆಬ್ಬಾತುಗಳು (Bar headed geese) ಚಳಿಗಾಲದಲ್ಲಿ ಭಾರತಕ್ಕೆ ವಲಸೆ ಬರುವುದು ವಾಡಿಕೆ. ಕರ್ನಾಟಕದ ಗದಗ ಜಿಲ್ಲೆಯ ಮಾಗಡಿ ಕೆರೆಯಲ್ಲಿ ನವೆಂಬರ್ ತಿಂಗಳಲ್ಲಿ ಅಂದಾಜು 15 ಸಾವಿರಕ್ಕೂ ಹೆಚ್ಚು ಪಟ್ಟೆ ಹೆಬ್ಬಾತುಗಳು ಬಂದಿವೆ. ಕಳೆದ ಏಳು ವರ್ಷಗಳಿಂದ ಚಳಿಗಾಲಕ್ಕೆ ದಾವಣಗೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಇವುಗಳು, ಈಗ ಡಿಸೆಂಬರ್ 26ರಂದು ಕೊಂಡಜ್ಜಿ ಕೆರೆಯಲ್ಲಿ ಪತ್ತೆಯಾಗಿವೆ. ಸದ್ಯಕ್ಕೆ 32 ಹಕ್ಕಿಗಳು ಇಲ್ಲಿ ವಿಹರಿಸುತ್ತಿದ್ದು ಸೂಕ್ತ ಪರಿಸರವಿದ್ದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸೇರಬಹುದು ಮತ್ತು ಇಲ್ಲಿಯೇ ಮಾರ್ಚ್ ತಿಂಗಳವರೆಗೆ ತಂಗುವ ನಿರೀಕ್ಷೆಯಿದೆ. ಕುಂದುವಾಡ ಕೆರೆಯನ್ನು ತ್ಯಜಿಸಿದ್ದರೂ ಕೊಂಡಜ್ಜಿ ಕೆರೆಯಲ್ಲಿ ಇವು ಬಂದಿರುವುದು ಸಂತೋಷದ ಸಂಗತಿ.

ಚಿತ್ರ ಮಾಹಿತಿ: **ಡಾ. ಎಸ್. ಶಿಶುಪಾಲ**, ಪ್ರಾಧ್ಯಾಪಕರು
ಸೂಕ್ಷ್ಮ ಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ,
sskumb@gmail.com, 9449162135







## ಆನೆಕೊಂಡದಲ್ಲಿ ಇಂದು ಕಾರ್ತಿಕ




ದಾವಣಗೆರೆ ಸಮೀಪದ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ಕಾರ್ತಿಕೋತ್ಸವವು ಇಂದು ರಾತ್ರಿ 8 ಗಂಟೆಗೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ಹರಿಹರಕ್ಕೆ ನಾಳೆ ಸಚಿವ ಈಶ್ವರಪ್ಪ

ದಾವಣಗೆರೆ, ಡಿ. 29- ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ನಾಡಿದ್ದು ದಿನಾಂಕ 31 ರ ಗುರುವಾರ ಹರಿಹರಕ್ಕೆ ಆಗಮಿಸಲಿದ್ದಾರೆ. ಸಚಿವರು ಅಂದು ಬೆಳಿಗ್ಗೆ ಶಿವಮೊಗ್ಗದಿಂದ ಹೊರಟು, ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕಿನ ಬೆಳ್ಳೂಡಿಗೆ ಆಗಮಿಸುವರು. ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಂತರ ಸಂಜೆ 4ಕ್ಕೆ ಶಿವಮೊಗ್ಗಕ್ಕೆ ತೆರಳುವರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯ ನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಂಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ, ಟೀಚರ್ಸ್ ಕಾಲೋನಿ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 4.30 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte